ತಿಂಗಳ ಪತ್ರಿಕೆ. ಜುಲೈ ೧೯೯೨

Jul 92

ಕನ್ನಡ ಮಹಿಳಾ ಪತ್ರಿಕೆಗಳು

ಸ್ತ್ರೀವಾದ ಮತ್ತು ಇಕೋ ಸ್ತ್ರೀವಾದ

ಸ್ತ್ರೀ ಸಂಚಯ

ಮೌನ ಮಾತಾದಾಗ

ಬಿ. ಟಿ. ಎಸ್. ಬಸ್‌ಗಳಲ್ಲಿ ಮಹಿಳೆಯರ ಬವಣೆ

ಮಾನಸ

ಸಂಪುಟ: ೫ ಸಂಚಿಕೆ: ೭

ಜುಲೈ ೧೯೯೨

ಸಂಪಾದಕೀಯ ಮಂಡಳಿ :
ರಾಜೇಶ್ವರಿ ಎಚ್. ಎಸ್.,
ಚಂಪಾವತಿ ಎಚ್. ಎಸ್., ದು. ಸರಸ್ವತಿ,
ಸವಿತ ಎ., ಗಾಯತ್ರಿ ವಿ.

ಸಲಹೆ—ಸಹಕಾರ
ಇಳಾವಿಜಯ

ವಿಳಾಸ "ಮಾನಸ ತಿಂಗಳ ಪತ್ರಿಕೆ"
ಪಂಚಾಯಿತಿ ರಸ್ತೆ
ಕಾಡುಗೋಡಿ (ಪೊ)
ಬೆಂಗಳೂರು—**560067**

ಬಿಡಿಪ್ರತಿ: 2 ರೂ.
ಸೂಚನೆ: ವಾರ್ಷಿಕ ಚಂದಾ: **20** ರೂ.
ಅಜೀವ ಚಂದಾ: **250** ರೂ.
ಒಂದು ವಿಶೇಷ ಸಂಚಿಕೆಯೊಂದಿಗೆ
ಒಟ್ಟು ಹನ್ನೊಂದು ಸಂಚಿಕೆಗಳು.
ಹಣವನ್ನು ಬ್ಯಾಂಕ್ ಡ್ರಾಫ್ಟ್, ಎಂ. ಓ.
ಮೂಲಕ ಸ್ವೀಕರಿಸಲಾಗುವುದು.

ಈ ಸಂಚಿಕೆಯಲ್ಲಿ..........

ಸಂಪಾದಕೀಯ

ಕನ್ನಡದ ಮಹಿಳಾ ಪತ್ರಿಕೆಗಳು
ಸರಸ್ವತಿ | ಗಾಯತ್ರಿ

ಸ್ತ್ರೀವಾದ ಮತ್ತು ಇಕೋ ಸ್ತ್ರೀವಾದ
— ವಾಲ್ ಪ್ಲವರ್ ವುಡ್
ವಿ. ಗಾಯತ್ರಿ.

ಗೋರಿಯಾಯಿತು ಕವನ (ಕವನ)
ದುರ್ಗಾ ಸುತೆ.

ಸ್ತ್ರೀ—ಸಂಚಯ

ಮೌನ ಮಾತಾದಾಗ
ಎಚ್. ಎಸ್ ಷಾಹೀನ್.

ಸಂಪಾದಕರು, ಪ್ರಕಾಶಕರು ಹಾಗೂ ಮುದ್ರಕರು ಎಚ್. ಎಸ್. ರಾಜೇಶ್ವರಿ, ಮಾನವಿ ಮುದ್ರಣಾಲಯ
ಪಂಚಾಯಿತಿ ರಸ್ತೆ, ಕಾಡುಗೋಡಿ ಅಂಚೆ ಬೆಂಗಳೂರು—೫೬೦೦೬೭.

ಸಂಪಾದಕೀಯ

ಮಗು ಇಲ್ಲದಿರುವುದು ಶಾಪ ! ಆಧುನಿಕ ಔಷಧಿಗಳಿಗೆ ಶಾಪ ತೊಳೆಯುವ ಶಕ್ತಿ ಇಲ್ಲ ! ಇನ್ನು ಯಜ್ಞ-ಯಾಗಾದಿಗಳು ತಾನೇ ಪಾಪ ತೊಳೆಯಬಲ್ಲುವು ! ಈ ನಂಬಿಕೆಯಿಂದಲೇ 1141 'ಶಾಪಗ್ರಸ್ತ' ದಂಪತಿಗಳು ಮೇ 2 ರಂದು ಪುತ್ರಕಾಮೇಷ್ಟಿಯಲ್ಲಿ ಭಾಗವಹಿಸಿದ್ದು. 'ಸೆಂಟರ್ ಫಾರ್ ಆಸ್ಟ್ರಲೋಜಿಕಲ್ ರಿಸರ್ಚ್ ಅಂಡ್ ಡೆವಲಪ್‌ಮೆಂಟ್,' ವಿದೇಶೀ ನೆರವಿನಿಂದ ಕಾಂಗ್ರೆಸ್-ಐನ ತುಂಬು ಹಾರೈಕೆಗಳನ್ನು ಹೊತ್ತು, 75 ಲಕ್ಷ ಖರ್ಚಿನಲ್ಲಿ ಆರು ದಿನಗಳ ಕಾಲ ನಡೆಸಿದ ಪತ್ರಕಾಮೇಷ್ಟಿಯಲ್ಲಿ ಪುತ್ರ ಸಂತಾನ ಪ್ರಾಪ್ತಿಗಾಗಿ ಭಾಗವಹಿಸಿದ್ದವರು ಮುಖ್ಯವಾಗಿ ಬ್ಯಾಂಕಿನಲ್ಲಿ, ಸರ್ಕಾರೀ ಕಛೇರಿಗಳಲ್ಲಿ ಕೆಲಸ ಮಾಡುವಂತಹವರೇ ! ವೈಚಾರಿಕತೆ, ವೈಜ್ಞಾನಿಕತೆ, ಮಹಿಳೆಯರ ಸ್ಥಾನಮಾನ ದಲ್ಲಿನ ಸುಧಾರಣೆಗಳಿಗೆ ಗಮನಾರ್ಹ ಕೊಡುಗೆ ಕೊಟ್ಟಿರುವ ಕೇರಳದಲ್ಲಿ ಇದು ನಡೆದದ್ದು ದೊಡ್ಡ ವ್ಯಂಗ್ಯವೆಂದುಕೊಂಡರೂ, ಇದಕ್ಕೆ ಹಿಂದೆ ಕೇರಳದಲ್ಲಿ ಇಂತಹ ನಾಲ್ಕು ಬೇರೆ ಬೇರೆ ಯಜ್ಞಗಳು ನಡೆದಿವೆ ಎಂಬುದನ್ನು ಮರೆಯು ವಂತಿಲ್ಲ.

ಯಾಗಕ್ಕೆ ಪೂರ್ವಭಾವಿಯಾಗಿ 'ಹಿಂದೂ ಸಾಂಸ್ಕಾರಿಕಾ ವೇದಿ' ಹಂಚಿದ್ದ ಕರಪತ್ರ "ಮುಪ್ಪಿನಲ್ಲಿ ಕೈಹಿಡಿದು ನಡೆಸಲು, ಯಮಕಿಂಕರು ಕಾಯುತ್ತಿರುವಾಗ ಗಂಗಾಜಲ ಬಾಯಿಗೆ ಬಿಡಲು, ಶವಯಾತ್ರೆಯಲ್ಲಿ ತಲೆ ಹಿಡಿಯಲು, ಕಾಲ ಕಾಲಕ್ಕೆ ಶ್ರಾದ್ಧ ಮಾಡಲು ಒಬ್ಬ ಮಗನು ಇಲ್ಲದಂತಹ 150 ಲಕ್ಷ ದಂಪತಿಗಳು ಇಂಡಿಯಾದಲ್ಲಿದ್ದಾರೆ" ಎಂಬ ಕೆಟ್ಟ ಪ್ರಚೋದನಾತ್ಮಕ ಮಾತುಗಳನ್ನು ಹೇಳುತ್ತಾ ಪುತ್ರಕಾಮೇಷ್ಟಿಯಿಂದ 'ಪುತ್ರಪ್ರಾಪ್ತಿ ಶತಸಿದ್ಧ' ಎಂಬ ಆಶ್ವಾಸನೆ ಕೊಟ್ಟಿದೆ.

ಬೇರೆ ಬೇರೆಯವರು ಬೇರೆ ಬೇರೆ ರೀತಿಯಲ್ಲಿ ಇದಕ್ಕೆ ಪ್ರತಿಕ್ರಿಯಿಸಿದ್ದಾರೆ.

ಬದ್ಧತೆಯುಳ್ಳ ಹಳೆಯ ವೈದೀಕ ಪಂಡಿತರು "ಯುಗದ ಕಾಲಗಣನೆಯ ಪ್ರಕಾರ ದಶರಥ ಇದನ್ನು ಕೈಗೊಂಡು ಲಕ್ಷೋಪಲಕ್ಷ ವರ್ಷಗಳೇ ಆಗಿದೆ, ಈ ಕಲಿಗಾಲದಲ್ಲಿ ಇವೆಲ್ಲ ಫಲಿಸುವುದು ಶುದ್ಧ ಸುಳ್ಳು ಎಂತಲೂ, ರಾಮನ ಹುಟ್ಟಿಗೂ ಪುತ್ರಕಾಮೇಷ್ಟಿಗೂ ಸಂಬಂಧವಿದೆ ಎಂದು ನಂಬುವುದು ಸಾಧ್ಯವಿಲ್ಲ ವೆಂತಲೂ ಹೇಳುತ್ತಾ ಇದನ್ನು "ಶುದ್ಧ ತೋರಿಕೆಯದ್ದು" ಎಂದು ಖಂಡಿಸಿದ್ದಾರೆ.

ಇ ಎಂ ಎಸ್ ನಂಬೂದರಿಪಾದರನ್ನೇ ಒಳಗೊಂಡಂತೆ, ಅನೇಕ ಎಡ

ಗುಂಪುಗಳು, "ಹಿಂದೂ ಧರ್ಮ ಜಾಗೃತಿಗಾಗಿ, ಜನಮನಗೆಲ್ಲಲು ಮಕ್ಕಳಿಲ್ಲದ ದಂಪತಿಗಳನ್ನು ಬಳಸಿಕೊಳ್ಳುತ್ತಿರುವ ಒಂದು ರಾಜಕೀಯ ಆಟ ಇದು" ಎಂದು ಟೀಕಿಸಿದ್ದಾರೆ.

ಇನ್ನೊಂದು ಕಡೆಯಲ್ಲಿ ಓ. ವಿ. ವಿಜಯನ್‌ರಂತಹ ಜವಾಬ್ದಾರಿಯುತ ಲೇಖಕರು ತಮ್ಮ ಲೇಖನದ ಸಂದರ್ಭವೊಂದರಲ್ಲಿ "ಸುಲಭವಾಗಿ ತಪ್ಪಿಸಬಹುದಾದ ಯುದ್ಧಗಳಲ್ಲಿ ನಮ್ಮ ಲಕ್ಷೋಪಲಕ್ಷ ಮಕ್ಕಳು ಸಾಯುತ್ತಿರುವಂತಹ ಅಂಧತೆಯ ಮುಂದೆ ಪುತ್ರಕಾಮೇಷ್ಟಿಯಂತಹ ಅಂಧತೆ ನನಗೇನೂ ಒಂದು ಸಮಸ್ಯೆಯಾಗಿ ಕಾಣುವುದಿಲ್ಲ" ಎಂಬ ಮಾತನ್ನು ಹೇಳಿದ್ದಾರೆ.

ಇಂತಹ ಮಾತುಗಳನ್ನಾಡುವ ಸಂದರ್ಭವೇನೇ ಇರಲಿ, ಈ ಬಗೆಯ ತೇಲಿಕೆಯ ಮಾತುಗಳಿಂದ ಮರೆಮಾಚಿಬಿಡಬಹುದಾದ ಸನ್ನಿವೇಶ ಇದಲ್ಲವೇ ಅಲ್ಲ. ಲಕ್ಷೋಪಲಕ್ಷ ಗಂಡುಮಕ್ಕಳು ಸಾಯುತ್ತಿರುವ ಯುದ್ಧದ ವಿಕೃತತೆಯ ಬೆನ್ನಿಗೇ ಪುತ್ರಕಾಮೇಷ್ಟಿಯಂತಹ ಇನ್ನೊಂದು ವಿಕೃತತೆ ಬೆಂಬಲವಾಗಿ ನಿಲ್ಲುವುದನ್ನು ಹೇಗೆ ತಾನೇ ಮರೆಮಾಚಲು ಸಾಧ್ಯ! ಇಂತಹ ಕಾರಣಕ್ಕಾಗಿಯೆಯೋ ಏನೋ ಈ ಯಾಗಕ್ಕೆ ತೀವ್ರ ಸ್ವರೂಪದ ಪ್ರತಿಭಟನೆ ಕಂಡು ಬಂದಿಲ್ಲ. "ಲಿಂಗಗಳ ಮಧ್ಯೆ ಸಮಾನತೆ" ಹೇಳುವ ಸಂವಿಧಾನದ ನೀತಿಯನ್ನು ಮುರಿಯುವ ಪುತ್ರಿಕಾಮೇಷ್ಟಿ ಕಾನೂನು ಬಾಹಿರವಾಗಿದ್ದಾಗ್ಯೂ Public interest litigation ಮೂಲಕ ತಡೆಯಾಜ್ಞೆಯನ್ನು ತರುವ ಪ್ರಯತ್ನವನ್ನು ಯಾರೊಬ್ಬರೂ ಮಾಡಲಿಲ್ಲ.

ಏನಿದರ ಅರ್ಥ ? ಮಹಿಳೆ ಆತ್ಮಗೌರವದ ಹಾದಿಯಲ್ಲಿ ಸ್ಪಷ್ಟ ಹೆಜ್ಜೆ ಮೂಡಿಸುತ್ತಿರುವ ಸಮಾಧಾನ ಮೂಡುತ್ತಿರುವಾಗಲೇ ಆಧುನಿಕ ಅಮ್ನಿಯೋಸಿಂಥಸಿಸ್‌ನಿಂದ ಹಿಡಿದು, ಪ್ರಾಚೀನ ಪುತ್ರಕಾಮೇಷ್ಟಿಯವರೆಗೆ ಏನೆಲ್ಲಾ ಸಾಧ್ಯವಿದೆಯೋ ಅದನ್ನೆಲ್ಲಾ ಬಳಸಿ ಅವಳನ್ನು ದಿಕ್ಕೆಡಿಸುವ ಪ್ರಯತ್ನ ಮಾಡಲಾಗುತ್ತಿದೆ. ಸಣ್ಣ ಪುಟ್ಟ ಪ್ರತಿಭಟನೆಗಳ ಬಿಸಿ ತಾಕಿಸಿಕೊಳ್ಳದೆ ಕೊಡವಿ ಬಿಡುವಷ್ಟು ಪ್ರಭಲವಾಗಿರುವುದರಿಂದಲೇ ಇವು ಮೇಲುಗೈ ಸಾಧಿಸುತ್ತವೆ.

'ಪುತ್ರ' ಎಂದರೆ 'ಮಗು' ಎಂದಾಗುತ್ತದೆಯೇ ವಿನಃ ಗಂಡು ಮಗು ಅಲ್ಲ ಎಂಬ ಹಾರಿಕೆಯ ಸಮಜಾಯಿಷಿ ಕೊಟ್ಟಿರುವ ಯಾಗದ ಸಂಯೋಜಕರು, ಸಂತಾನಹರಣ ಚಿಕಿತ್ಸೆ ಮಾಡಿಕೊಂಡವರು, ಮುಟ್ಟು ನಿಂತವರು ಇದರಲ್ಲಿ ಭಾಗವಹಿಸುವಂತಿಲ್ಲ ಎಂದಿದ್ದಾರೆ. ಹಾಗೆಯೇ ಗಂಡು ಮಗು ಹುಟ್ಟದೇ ಹೋದಲ್ಲಿ ದಂಪತಿಗಳಲ್ಲಿ ಶ್ರದ್ಧೆಯ ಕೊರತೆಯಿತ್ತೆಂದೇ ಅರ್ಥ ಎಂತಲೂ ಹೇಳಿದ್ದಾರೆ. ಇಂತಹದ್ದನ್ನು ಗಮನಿಸಿದಾಗ ಇದೊಂದು ಯಾವ ಬಗೆಯ ಬದ್ಧತೆಯನ್ನು ಹೊಂದಿರದೆ ಶುದ್ಧ ಕಪಟ ಸ್ವರೂಪೀಯಾಗಿರುವುದು ಸ್ಪಷ್ಟವಾಗುತ್ತದೆ. ಮಹಿಳೆಯ ದಮನಕ್ಕೆ ಪ್ರಯತ್ನಿಸುವ ಇಂತಹ ಪೊಳ್ಳು ಕೈಂಕರ್ಯಗಳನ್ನು ಸ್ಪಷ್ಟವಾಗಿ ಖಂಡಿಸಬೇಕಾಗಿದೆಯೇ ಹೊರತು ಇಲ್ಲಿ ಯಾವ ಜಿಜ್ಞಾಸೆಗೂ ಅಸ್ಪದವಿಲ್ಲ.

ಕನ್ನಡದ ಮಹಿಳಾ ಪತ್ರಿಕೆಗಳು

ಒಂದು ಸಂಕ್ಷಿಪ್ತ ಪರಿಚಯ

ಸರಸ್ವತಿ ಡು.
ಗಾಯತ್ರಿ ವಿ.

ಪ್ರಸ್ತುತ ಪ್ರಸಾರ ಮಾಧ್ಯಮಗಳು ತನ್ನದೇ ಆಸೆ, ಕನಸು ಸ್ವಂತಿಕೆಯುಳ್ಳ ಸ್ವತಂತ್ರ ಮತ್ತು ಆತ್ಮಾಭಿಮಾನದ ಮಹಿಳೆಯರನ್ನು ಚಿತ್ರಿಸುವುದು ತುಂಬಾ ವಿರಳ. ಇಲ್ಲೆಲ್ಲಾ ಪುರುಷರ ಹಾಗೂ ಉದ್ದಿಮೆಗಳ ಬಳಕೆಯ ವಸ್ತುಗಳಾಗೇ ಮಹಿಳೆಯರು ಚಿತ್ರಿತಗೊಳ್ಳುತ್ತಾರೆ. ಮುಖ್ಯ ವಾಹಿನಿಯಲ್ಲಿನ ಮಾಧ್ಯಮಗಳು ಸ್ವಲ್ಪ ಮಟ್ಟಿಕ್ಕೆ ಮಹಿಳೆಯರ ಮೇಲಿನ ದೌರ್ಜನ್ಯದ ಮೇಲೆ ಬೆಳಕು ಚೆಲ್ಲಿದರೂ ಮಹಿಳೆಯರ ದುಡಿಮೆ, ಲೈಂಗಿಕತೆ, ಸಂತಾನೋತ್ಪಾತ್ತಿಗಳ ಸಂಬಂಧದ ಸೂಕ್ಷ್ಮ ಪ್ರಶ್ನೆಗಳನ್ನು ಎತ್ತುತ್ತಿಲ್ಲ. ಸಾಹಿತ್ಯ ಹಾಗೂ ಇನ್ನಿತರ ಸಾಮಾಜಿಕ ಕ್ಷೇತ್ರಗಳಲ್ಲಿ ಕೂಡ ಸ್ವತಂತ್ರ ಚಿಂತನೆಯ ಮಹಿಳೆಯನ್ನು ಪಿತೃಪ್ರಧಾನ ಸಮಾಜ ಬದಿಗೊತ್ತಿದೆ. ಹೀಗಾಗಿ ಎಲ್ಲಾ ಪರ್ಯಾಯ ಸಾಂಸ್ಕೃತಿಕ ಚಳವಳಿಗಳು, ಮುಖ್ಯವಾಗಿ ವೈಚಾರಿಕ ಮಹಿಳಾ ಗುಂಪುಗಳು ಈ ವೈರುಧ್ಯದ ವಿರುದ್ಧ ತುಂಬಾ ಗಂಭೀರವಾಗಿ ಕೆಲಸಮಾಡಬೇಕಾದುದು ಮುಖ್ಯ ಮತ್ತು ಅನಿವಾರ್ಯವಾಗುತ್ತದೆ. ನಮ್ಮಲ್ಲಿನ ಇಂತಹ ಗಂಭೀರ ಪ್ರಯತ್ನಗಳು ಕೂಡ ತಮ್ಮ ಸಾವಯವವನ್ನು ಕಾಪಾಡಿಕೊಳ್ಳಲು ಸಾಧ್ಯವಾಗದೇ ಹೋಗಿರುವುದು ಸತ್ಯಸ್ಥಿತಿಯಾಗಿ ರಾಚುತ್ತದೆ. ಆರ್ಥಿಕ ಅಡಚಣೆಗಳು ಅನೇಕ ಸಲ ಇದಕ್ಕೆ ಕಾರಣವಾದರೆ, ಅದಕ್ಕಿಂತ ಮುಖ್ಯವಾಗಿ ಗಟ್ಟಿಯಾದ ಸಾಂಸ್ಕೃತಿಕ, ಇತಿಹಾಸಾತ್ಮಕ ಅರ್ಥಗ್ರಹಿಕೆಯ ಕೊರತೆಯೂ ಕಾರಣವಾಗಿರುವುದು ಕಂಡುಬಂದಿದೆ. ಕನ್ನಡದ ಮಹಿಳಾ ಪತ್ರಿಕೆಗಳನ್ನು ಕುರಿತು ಹೇಳುವಾಗ ಕೂಡ ಈ ಅಂಶಗಳನ್ನು ಹೊರತು ಪಡಿಸಲು ಸಾಧ್ಯವೇ ಆಗುವುದಿಲ್ಲ. ನಿರಂತರ ಆತ್ಮಶೋಧನೆ ಎಷ್ಟೊಂದು ಕಷ್ಟವಾದುದೆಂಬುದನ್ನು ಮಹಿಳಾ ಪತ್ರಿಕೆಗಳೆಡೆಗೆ ನಾವು ನಡೆಸಿದ ಸಣ್ಣ ಸಮೀಕ್ಷೆಯೇ ಸ್ಪಷ್ಟಪಡಿಸುತ್ತದೆ. ನಮ್ಮ ಉದ್ದೇಶಕ್ಕಾಗಿ ಇಲ್ಲಿ ಮುಖ್ಯ ವಾಹಿನಿಯಲ್ಲಿನ ವ್ಯಾಪಾರೀ ದೃಷ್ಟಿಯ ಪತ್ರಿಕೆಗಳನ್ನು ಕೈಬಿಡಲಾಗಿದೆ. ಕನ್ನಡದ ಮೊಟ್ಟ ಮೊದಲ ಮಹಿಳಾ ಪತ್ರಿಕೆಯಿಂದ ಇಂದಿನವರೆಗಿನ ಪತ್ರಿಕೆಗಳನ್ನು ಸೈದ್ಧಾಂತಿಕ ಅರ್ಥಗ್ರಹಿಕೆಗನುಸಾರ ಎರಡು ಘಟ್ಟಗಳಾಗಿ ವಿಂಗಡಿಸಿಕೊಂಡಿದ್ದೇವೆ.

ಮೊದಲನೆ ಘಟ್ಟ

ರಾಷ್ಟ್ರೀಯ ಚಳವಳಿಯು ನಮ್ಮ ಸಮಾಜದ ಎಲ್ಲ ವರ್ಗಗಳ ಪ್ರತಿಕ್ರಿಯೆಗಳಿಗೆ ಚಾಲನೆ ನೀಡಿತು. ಕರ್ನಾಟಕ ಮತ್ತು ಇಲ್ಲಿನ ಮಹಿಳೆಯರೇನೂ ಇದಕ್ಕೆ ಹೊರತಾಗಿರಲಿಲ್ಲ. ಕನ್ನಡದ ಮೊದಲ ಮಹಿಳಾ ಪತ್ರಿಕೆ "ಕರ್ನಾಟಕ ನಂದಿನಿ" ಮತ್ತು ರಾಷ್ಟ್ರೀಯ ಚಳುವಳಿಯೊಡಗಿನ ಸಹಭಾಗಿತ್ವವನ್ನು ಸ್ಪಷ್ಟವಾಗಿ ಗುರುತಿಸಬಹುದು. ಪತ್ರಿಕೆ ಚರ್ಚೆಗೆ ಎತ್ತಿಕೊಳ್ಳುತ್ತಿದ್ದ ವಿಷಯಗಳು ಇದನ್ನು ಸ್ಪಷ್ಟಪಡಿಸುತ್ತವೆ.

ಪಿತೃಪ್ರಧಾನತೆಯ ಚೌಕಟ್ಟಿನೊಳಗಡೆಯೆ ಒಂದಷ್ಟು ಪ್ರಗತಿಪರ ಸುಧಾರಕ ಅಂಶಗಳ ಚರ್ಚೆಯಾಗುತ್ತಿದ್ದುದು ಮೊದಲ ಘಟ್ಟದಲ್ಲಿ ಕಂಡುಬರುವ ಮುಖ್ಯ ಲಕ್ಷಣ.

ಕರ್ನಾಟಕ ನಂದಿನಿ (೧೯೧೬-೧೯೨೦) : ದೊರೆತಿರುವ ಎಲ್ಲಾ ದಾಖಲೆಗಳ ಪ್ರಕಾರ ೧೯೧೬ ರಲ್ಲಿ ನಂಜನಗೂಡು ತಿರುಮಲಾಂಬ ಅವರ ಸಂಪಾದಕೀಯತ್ವದಲ್ಲಿ ಪ್ರಾರಂಭಗೊಂಡ "ಕರ್ನಾಟಕ ನಂದಿನಿ"ಯೇ ಮೊದಲ ಮಹಿಳಾ ಪತ್ರಿಕೆ. ಈಕೆ ಕರ್ನಾಟಕದ ಮೊದಲ ಪತ್ರಕರ್ತೆ ಎಂದು ಕೂಡ ಗುರುತಿಸಬಹುದು. ತಿರುಮಲಾಂಬ ತುಂಬಾ ಕಷ್ಟಪಟ್ಟು ಪತ್ರಿಕೆ ತರುತ್ತಿದ್ದರು. ಆಗ ನಂಜನಗೂಡಿನಲ್ಲಿ ಮುದ್ರಣಾ ಸೌಲಭ್ಯವಿಲ್ಲದೇ ಇದ್ದ ಕಾರಣವಾಗಿ ಪತ್ರಿಕೆಯ ಮುದ್ರಣಕ್ಕೆ ಪ್ರತಿ ಸಾರಿಯೂ ಆಕೆ ಧಾರವಾಡಕ್ಕೆ ಹೋಗುತ್ತಿದ್ದರು. ಇಂತಹ ಸನ್ನಿವೇಶದಲ್ಲೇ ನಾಲ್ಕು ವರ್ಷಗಳ ಕಾಲ, ಹನ್ನೆರಡು ಸಂಚಿಕೆಗಳನ್ನು ಆಕೆ ಹೊರತಂದರು. ಮಹಿಳಾ ಶಿಕ್ಷಣ, ಪ್ರತಿವ್ರತಾ

ಧರ್ಮ, ಹಿಂದೂ ಮಹಿಳೆಯ ಪಾತ್ರ ಇತ್ಯಾದಿಗಳು ಕರ್ನಾಟಕ ನಂದಿನಿಯಲ್ಲಿ ಚರ್ಚಿತವಾಗುತ್ತಿದ್ದ ಮುಖ್ಯ ವಿಷಯಗಳಾಗಿದ್ದವು. ಪವಿತ್ರ ಗ್ರಂಥಗಳ ಆಯ್ದ ಭಾಗಗಳು ತಪ್ಪದೇ ಪ್ರಕಟವಾಗುತ್ತಿದ್ದವು. ಛಾಪೆ ತುಂಬಾ ಶಿಷ್ಟವಾಗಿರುತ್ತಿತ್ತು. ಮೂಲತಃ ಸ್ವಾತಂತ್ರ್ಯ ಚಳವಳಿ ಮತ್ತು ಪವಿತ್ರ ಗ್ರಂಥಗಳೇ ಪತ್ರಿಕೆಯ ಪ್ರೇರಣೆಯಾಗಿದ್ದವು. ತಿಲಕರೊಂದಿಗೆ ಶ್ರೀಮತಿ ತಿರುಮಲಾಂಬರವರ ಸಹಭಾಗಿತ್ವದಿಂದಾಗಿ ಪತ್ರಿಕೆಯು ಬ್ರಿಟೀಷ್ ಸರಕಾರದ ಕಣ್ಣಿಗೆ ಬಿತ್ತು. ಅವರು ಪತ್ರಿಕೆಯನ್ನು ಎಚ್ಚರಿಕೆಯಿಂದ ಪರಿಶೀಲಿಸುತ್ತಿದ್ದರು. ಆದರೂ ಪತ್ರಿಕೆ ನಿಂತು ಹೋಗಲು ಆರ್ಥಿಕ ಮುಗ್ಗಟ್ಟೇ ಕಾರಣವಾಗಿತ್ತೆಂದು ತಿಳಿದು ಬರುತ್ತದೆ.

ಸನ್ಮಾರ್ಗ ದರ್ಶಿನಿ : ೧೯೨೨ ರಲ್ಲಿ ಪ್ರಾರಂಭವಾದ ಈ ಪತ್ರಿಕೆಯ ಸಂಪಾದಕಿಯೂ ಶ್ರೀಮತಿ ತಿರುಮಾಲಾಂಬರವರೇ. ಅನೇಕರು ಇದನ್ನು ಮಹಿಳಾ ಪತ್ರಿಕೆಯೆಂದು ಪರಿಗಣಿಸಿದರೂ, ಇದು ಮಹಿಳಾ ಸಂಬಂಧೀ ವಿಷಯಗಳಿಗಷ್ಟೇ ಸೀಮಿತವಾಗಿರಲಿಲ್ಲ. ರಾಷ್ಟ್ರೀಯ ಭಾವನೆ, ದೇಶಾಭಿಮಾನಗಳನ್ನು ಉತ್ತೇಜಿಸುವಂತಹ ಪ್ರಯತ್ನಗಳಲ್ಲಿ ಪ್ರಾಮಾಣಿಕವಾಗಿ ತೊಡಗಿಕೊಳ್ಳುತ್ತಿದ್ದ ಪತ್ರಿಕೆ ರಾಜರಾಮ ಮೋಹನರಾಯ ಅವರ ಅಭಿಪ್ರಾಯಗಳನ್ನು ಅನುಮೋದಿಸುತ್ತಿತ್ತು. ಅಂದಿನ ಕಾಲಕ್ಕೆ ತುಂಬಾ ಪ್ರಬಲವೆಂದು ಹೇಳಬಹುದಾದ ವಿಗ್ರಹಾರಾಧನೆ, ಪ್ರಾಣಿವಧೆ ಮುಂತಾದ ಆಚರಣೆಗಳನ್ನು ಅಲ್ಲದೆ, ಒಡವೆ-ವಸ್ತ್ರಗಳಿಗಾಗಿ ಹಣ ವ್ಯಯ ಮುಂತಾದವನ್ನು ಪತ್ರಿಕೆ ಪ್ರಶ್ನಿಸುತ್ತಿತ್ತು, ಖಂಡಿಸುತ್ತಿತ್ತು. ನೀತಿ ಭೋದನೆಗಳು, ದೇಶದ ಉತ್ತಮ ಪ್ರಜೆಯಾಗಲಿಕ್ಕೆ ಬೇಕಾದಂತಹ ಮಾರ್ಗದರ್ಶನ, ಒಳ್ಳೆಯ ಶಿಕ್ಷಣಕ್ಕಾಗಿ ಸಲಹೆಗಳು, ಉತ್ತಮ ಸಂಗಾತಿಯ ಕಲ್ಪನೆ ಇತ್ಯಾದಿ ವಿಷಯಗಳನ್ನೆಲ್ಲಾ ಸನ್ಮಾರ್ಗದರ್ಶಿನಿ ವ್ಯಾಪಕವಾಗಿ ಚರ್ಚಿಸುತ್ತಿತ್ತು.

ಸರಸ್ವತಿ (೧೯೨೦-೬೨) : ಪ್ರಾಯಶಃ ಮೊಟ್ಟ ಮೊದಲ ಬಾರಿಗೆ ಪುರುಷ ಪ್ರಧಾನ ಮೌಲ್ಯಗಳನ್ನು ಅಸ್ಪಷ್ಟವಾಗಿಯಾದರೂ ಪ್ರಶ್ನಿಸಲು ಪ್ರಾರಂಭಿಸಿದ್ದು "ಸರಸ್ವತಿ." ಎಲ್ಲಾ ಕ್ಷೇತ್ರಗಳಲ್ಲೂ ಮಹಿಳೆಯರ ಸಮಾನತೆಗಾಗಿ ಪ್ರಜ್ಞಾಪೂರ್ವಕ ವಾದ ಒಡ್ಡುತ್ತಿತ್ತು. ಮಾಸ ಪತ್ರಿಕೆ ಸರಸ್ವತಿ ಶ್ರೀಮತಿ ಆರ್. ಕಲ್ಯಾಣಮ್ಮನವರ ಸಂಪಾದಕೀಯದಲ್ಲಿ ಹೊರ ಬರುತ್ತಿತ್ತು. ನಲವತ್ತು ಪುಟಗಳ ಸಚಿತ್ರ ಪತ್ರಿಕೆ ಸರಸ್ವತಿ. ಇನ್ನೊಂದು ಗಮನೀಯ ಅಂಶವೆಂದರೆ ಸರಸ್ವತಿಯ ಮುಖಪುಟ ಭೋದನೆ, ಬರವಣಿಗೆ, ಸಂಗೀತ, ನೂಲುವುದು ಮುಂತಾದ ಚಟುವಟಿಕೆಗಳಲ್ಲಿ ಮಹಿಳೆ ನಿರತಳಾಗಿರುವಂತಹ ಅಸಂಪ್ರದಾಯಕ ಚಿತ್ರಗಳನ್ನು ಹೊಂದಿರುತ್ತಿದ್ದುದು. ಮಹಿಳೆಯರನ್ನು ಕೆಚ್ಚೆದೆಯವರಾಗಿರಲಿಕ್ಕೆ ಹುರಿದುಂಬಿಸುತ್ತಿದ್ದ ಪತ್ರಿಕೆ ವಿಜಯಲಕ್ಷ್ಮಿ ಪಂಡಿತ್, ಸುಚೇತ ಕೃಪಲಾನಿ, ಸರೋಜಿನಿ ನಾಯುಡು, ಪಾರ್ವತಿ ದೇವಿ ಕೇಸರಿ ಮುಂತಾದ ಹೆಸರಾಂತ ಮಹಿಳೆಯರ ಜೀವನ ಚರಿತ್ರೆಯನ್ನು ಪ್ರಕಟಿಸುತ್ತಿತ್ತು. ತಮಿಳುನಾಡಿನ ಮಹಿಳೆಯರು, ಅಮೆರಿಕದ ಮಹಿಳಾ ಪತ್ರಕರ್ತರು ಇತ್ಯಾದಿ ಲೇಖನಗಳೂ ಸರಸ್ವತಿಯಲ್ಲಿ ಪ್ರಕಟವಾಗಿವೆ. ತನ್ನ ಸಂಪಾದಕೀಯವೊಂದರಲ್ಲಿ ಸರಸ್ವತಿ "ಮಹಿಳೆ ಮನೆಗಷ್ಟೇ ಸೀಮಿತವಲ್ಲ, ಆಕೆ ಮನೆಯಿಂದ ಹೊರಬಂದು, ನಿರ್ಗತಿಕ ಮಹಿಳೆಯರಿಗೆ ಸಹಾಯ ಹಸ್ತ ನೀಡಬೇಕು" ಎಂದು ಹೇಳುತ್ತದೆ.

ತನ್ನ ಇನ್ನೊಂದು ಸಂಚಿಕೆಯಲ್ಲಿ "ಭಾರತ ಮಾತೆಯು ಮಹಾನ್ ಪುತ್ರರಿಗೆ ಮಾತ್ರ ಜನ್ಮ ನೀಡಿಲ್ಲ ಮಹಾನ್ ಪುತ್ರಿಯರಿಗೂ ಜನ್ಮ ನೀಡಿದ್ದಾಳೆ" ಎಂದು ಸರಸ್ವತಿ ಪ್ರತಿಪಾದಿಸಿದೆ. ಒಟ್ಟಾರೆಯಲ್ಲಿ ಹೇಳಬೇಕೆಂದರೆ ಮಹಿಳೆಯರು ಪುರುಷರಿಗೆ ಸಮಾನರು, ಯಾವುದೇ ವಿಷಯ - ಸಮಸ್ಯೆಗಳನ್ನು ಅರ್ಥಮಾಡಿಕೊಳ್ಳುವಷ್ಟು ಸಮರ್ಥರು ಎಂಬುದು ಪತ್ರಿಕೆಯ ನಿಲುವು. ತಾಯ್ತನವನ್ನು ಕುರಿತಾದ ಪ್ರಶ್ನೆಗಳನ್ನೆತ್ತಿದ, ಸಮಾನ ವೇತನಕ್ಕಾಗಿ ವಾದಿಸಿದ ಮೊಟ್ಟ ಮೊದಲ ಪತ್ರಿಕೆ ಸರಸ್ವತಿಯೆನ್ನಬಹುದು. ಮಹಿಳಾ ನಾಯಕತ್ವವನ್ನು ಪ್ರೋತ್ಸಾಹಿಸುತ್ತಿದ್ದ ಪತ್ರಿಕೆ ಗೋಷ್ಠಿ – ಸಮಾರಂಭಗಳನ್ನು ಮಹಿಳಾ ದೃಷ್ಟಿಕೋನದಿಂದ ವಿಮರ್ಶಾತ್ಮಕವಾಗಿ ವರದಿ ಮಾಡುತ್ತಿತ್ತು. ಸಾಹಿತ್ಯಿಕ ಮಹಿಳಾ ಗೋಷ್ಠಿಗಳನ್ನು ತಪ್ಪದೆ ವರದಿ ಮಾಡುತ್ತಿತ್ತು. ವೇಶ್ಯಾವೃತ್ತಿ ಮತ್ತು ಅದನ್ನು ನಿರಂತರಗೊಳಿಸುವಲ್ಲಿ ಪುರುಷರ ಪಾತ್ರವನ್ನು ಕುರಿತಾದ ಚರ್ಚೆ ಸರಸ್ವತಿಯಲ್ಲಿದೆ. ಮಹಿಳಾ ದೃಷ್ಟಿಕೋನವುಳ್ಳ ಲೇಖನಗಳಲ್ಲದೆ ಆಯುರ್ವೇದ, ಅಣು ಅಂತರ್ಜಲ ಥಾಮಿ, ದಶಮಾಂಶ ಪದ್ಧತಿ, ಬಲ್ಗೇರಿಯಾದ

ಸ್ವಾತಂತ್ರ್ಯ, ಪೌಷ್ಟಿಕ ಆಹಾರಗಳು... ಹೀಗೆ ಅಗಣಿತ ವಿಷಯಗಳನ್ನು ಪತ್ರಿಕೆ ಚರ್ಚಿಸುತ್ತಿತ್ತು. ರಾಜಕೀಯ ವಿಷಯಗಳನ್ನು ಚರ್ಚಿಸುವಲ್ಲಿ ಸರಸ್ವತಿಯೇನೂ ಹಿಂದೆ ಬೀಳಲಿಲ್ಲ. ಬೂಧಾನ ಚಳವಳಿ, ಸ್ವಾತಂತ್ರ್ಯ ಚಳವಳಿಗಳು ಸರಸ್ವತಿಯ ಚರ್ಚೆಯ ವಿಷಯಗಳಾಗಿದ್ದವು. ಒಟ್ಟಿನಲ್ಲಿ ಈ ಪತ್ರಿಕೆ ರಾಷ್ಟ್ರೀಯ ಐಕ್ಯತೆಯನ್ನು ಸಾರುವಲ್ಲಿ ವಹಿಸಿದ ಪಾತ್ರ ಗಣನೀಯವಾದದ್ದೆಂದೇ ಹೇಳಬಹುದು. ಮುನ್ನೂರು ಚಂದಾದಾರರಿಂದ ಪ್ರಾರಂಭವಾದ ಪತ್ರಿಕೆ ಎರಡು ಸಾವಿರ ಚಂದಾದಾರವರೆಗೂ ತಲುಪಿತ್ತು. ಶಾಲೆ ಮತ್ತು ಗ್ರಂಥಾಲಯಗಳಿಗೆ ಈ ಪತ್ರಿಕೆ ತಲುಪುತ್ತಿತ್ತು.

ವೀರಮಾತೆ (೧೯೫೨-೧೯೭೦) : ಧಾರವಾಡದ ವನಿತಾ ಸಮಾಜವು ಈ ಪತ್ರಿಕೆಯನ್ನು ಪ್ರಕಟಿಸುತ್ತಿತ್ತು. ಬೇರೆ ಬೇರೆ ಸಮಯಗಳಲ್ಲಿ ಬೇರೆ ಬೇರೆಯವರ ಸಂಪಾದಕೀಯತ್ವ ಪತ್ರಿಕೆಗಿತ್ತು. ಪತ್ರಿಕೆಯ ಸಂಪಾದಕೀಯವು ಜ್ಞಾನಾರ್ಜನೆಯಲ್ಲಿ ಮಾತೃಭಾಷೆಯ ಮಹತ್ವ, ಕೀಳು ಅಭಿರುಚಿಯ ಸಾಹಿತ್ಯ, ಆಹಾರ ನಿಯಂತ್ರಣದ ಬಗ್ಗೆ ರಾಜಾಜಿಯವರ ನಿಲುವು, ಭೂದಾನ ಚಳವಳಿ ಮುಂತಾದ ಗಂಭೀರ ವಿಷಯಗಳನ್ನು ಚರ್ಚಿಸುತ್ತಿತ್ತು. ತನ್ಮೂಲಕ ರಾಜಕೀಯ ಪ್ರಜ್ಞೆಯನ್ನು ಹೆಚ್ಚಿಸುವಲ್ಲಿ ಪ್ರಯತ್ನಿಸುತ್ತಿತ್ತು. ಕಥೆ, ಕವನ, ಕಾನೂನು ಸಲಹೆಯ ಬಗ್ಗೆ ಮಾಹಿತಿ, ಆರೋಗ್ಯ, ಅಡುಗೆ, ಕಸೂತಿಗಳನ್ನು ಕುರಿತ ಲೇಖನಗಳನ್ನು ಪತ್ರಿಕೆ ಪ್ರಕಟಿಸುತ್ತಿತ್ತು. ಬೇರೆ ಭಾಷೆಗಳ ಸಣ್ಣ ಕತೆ ಮತ್ತು ಲೇಖನಗಳನ್ನು ಪತ್ರಿಕೆ ಅನುವಾದಿಸಿ ಪ್ರಕಟಿಸುತ್ತಿತ್ತು. ಮಹಿಳೆಯರ ಶಿಕ್ಷಣ, ಬಹುವಿವಾಹ, ಅತ್ಯಾಚಾರ, ಮಹಿಳೆಯರ ವಿರುದ್ಧದ ವಿವಿಧ ದೌರ್ಜನ್ಯಗಳು ಇತ್ಯಾದಿಗಳನ್ನು ಕುರಿತ ಟೀಕಾತ್ಮಕ ಲೇಖನಗಳನ್ನು ಪತ್ರಿಕೆ ಪ್ರಕಟಿಸುತ್ತಿತ್ತು. ಇವುಗಳ ಜತೆಗೆಯೇ ಅಂತರ-ರಾಷ್ಟ್ರೀಯ ವಿದ್ಯಮಾನಗಳತ್ತಲೂ ಪತ್ರಿಕೆ ಬೆಳಕು ಚೆಲ್ಲುತ್ತಿತ್ತು. ಪ್ರತಿ ತಿಂಗಳೂ ಪ್ರಕಟವಾಗುತ್ತಿದ್ದ ಪತ್ರಿಕೆಗೆ ಸಾವಿರಕ್ಕೂ ಮಿಕ್ಕಿ ಚಂದಾದಾರರಿದ್ದರು. ಚಂದ್ರಶೇಖರ ಕಂಬಾರರಂತಹ ಹೆಸರಾಂತರು ಈ ಪತ್ರಿಕೆಗೆ ತಪ್ಪದೆ ಬರೆಯುತ್ತಿದ್ದರು.

ಸೋದರಿ (೧೯೫೦-೫೮) : ಈ ಪತ್ರಿಕೆಯನ್ನು ಶ್ರೀಮತಿ, ಎಂ. ಆರ್. ಲಕ್ಷ್ಮಮ್ಮನವರು ೧೯೫೦ರಲ್ಲಿ ಪ್ರಾರಂಭಿಸಿದರು. ಎಂಟು ವರ್ಷಗಳ ಕಾಲ ನಡೆದ ಈ ಪತ್ರಿಕೆ ಎರಡರಿಂದ ಮೂರು ಸಾವಿರದವರೆಗೂ ಚಂದಾದಾರರನ್ನು ಹೊಂದಿತ್ತು. ಸೋದರಿ ಮಹಿಳಾ ಚಳವಳಿಯನ್ನು ಕುರಿತ ಲೇಖನಗಳನ್ನು ಪ್ರಕಟಿಸಿದೆಯಲ್ಲದೆ ರಾಜಕೀಯ ಮತ್ತು ಆರ್ಥಿಕ ಪ್ರಶ್ನೆಗಳನ್ನು ಚರ್ಚಿಸಿದೆ. ಕಾದಂಬರಿಗಳನ್ನು ಧಾರವಾಹಿಯಾಗಿ ಪ್ರಕಟಿಸಲು ಪ್ರಾರಂಭಿಸಿದ ಮೊದಲ ಪತ್ರಿಕೆಯೇ ಸೋದರಿ. ಕನ್ನಡದ ಅನೇಕ ಲೇಖಕಿಯರು ತಪ್ಪದೆ ಸೋದರಿಗೆ ಬರೆಯುತ್ತಿದ್ದರು. ಹೀಗೆ ಉಂಟಾಗುತ್ತಿದ್ದ ಚರ್ಚೆಯಿಂದ ಮಹಿಳೆಯರ ವಿಶ್ಲೇಷಣಾತ್ಮಕ, ಚಿಂತನಶೀಲ ಸಾಮರ್ಥ್ಯವು ಪ್ರಖರಗೊಳ್ಳಲು ಸಹಾಯವಾಗುತ್ತಿತ್ತು.

ಎರಡನೇ ಘಟ್ಟ :

ಮೊದಲ ಘಟ್ಟದಲ್ಲಿ ರಾಷ್ಟ್ರೀಯ ಚಳವಳಿ ಸ್ಫೂರ್ತಿಯಾದರೆ, ಎರಡನೇ ಘಟ್ಟ ಪಶ್ಚಿಮದ ಸ್ತ್ರೀ ವಿಮೋಚನಾ ಚಳವಳಿಯಿಂದ ಪ್ರೇರಣೆ ಪಡೆದದ್ದು. ಈ ಪೀಳಿಗೆಯ ಚಿಂತನೆಯನ್ನು ರೂಪಿಸುವಲ್ಲಿ ಪಶ್ಚಿಮದ ಅನೇಕ ಸ್ತ್ರೀವಾದೀ ಬರಹಗಾರ್ತಿಯರ ಕೊಡುಗೆ ಇದೆ. ಹೀಗೆ ಪ್ರೇರಿತಗೊಂಡ ವಿಚಾರಗಳನ್ನು ಸ್ವಾತಂತ್ರ್ಯ ನಂತರದ ಭಾರತದ ನಿರ್ದಿಷ್ಟ ಸಮಸ್ಯೆಗಳೊಂದಿಗೆ ಮೇಳೈಸಿದ ಚರ್ಚೆ ಎರಡನೇ ಘಟ್ಟದಲ್ಲಿ ಬರುವ ಮಹಿಳಾ ಪತ್ರಿಕೆಗಳ ಕೇಂದ್ರ ವಿಷಯವಾಗಿದೆ.

ಸಮತಾ ಸಮಾಚಾರ ಪತ್ರಿಕೆ : ಮಹಿಳಾ ಶೋಷಣೆಯ ವಿವಿಧ ಮುಖಗಳನ್ನು ಚರ್ಚಿಸುವುದು ತನ್ಮೂಲಕ ಸ್ವಯಂ ಅಲೋಚನಾತ್ಮಕ ಅರಿವನ್ನು ಬೆಳೆಸಿಕೊಳ್ಳುವುದು ಸಮತಾದ ಹುಟ್ಟಿನ ಹಿಂದೆ ಇದ್ದ ಮೂಲ ಉದ್ದೇಶ. ಸ್ಥೂಲ ಅರ್ಥೈಸುವಿಕೆಗೆ ದಕ್ಕುವಂತೆ ಸಮತಾ ಒಂದು ಎಡಪಂಥೀಯ ಧೋರಣೆಯ ಗುಂಪು. ೧೯೭೯ ರಲ್ಲಿ ಪ್ರಾರಂಭವಾದ ಸಮತಾ ಮೈಸೂರಿನಲ್ಲಿ ನೆಲೆ ಬಿಟ್ಟಿದ್ದರೂ, ಕರ್ನಾಟಕದ ಬೇರೆ ಬೇರೆ ಸ್ಥಳಗಳಲ್ಲಿ ಮಹಿಳಾ ಸಂಬಂಧೀ ಚರ್ಚೆಗಳನ್ನು ಪ್ರೇರೇಪಿಸುತ್ತದೆ. ಸಮತಾ ತನ್ನಲ್ಲಿನ ಚಟುವಟಿಕೆಗಳಿಗೆ, ಚರ್ಚೆಗಳಿಗೆ ಹೆಚ್ಚಿನ ಮೂರ್ತತೆಯನ್ನು ತಂದುಕೊಡುವ ಉದ್ದೇಶಕ್ಕಾಗಿ "ಸಮತಾ ವಾರ್ತಾಪತ್ರ"ವನ್ನು ಹೊರತರಲು ಪ್ರಾರಂಭಿಸಿತು.

೧೯೭೯ ರಲ್ಲಿ ಸೈಕ್ಲೋಸ್ಟೈಲ್ಡ್ ಹಾಳೆಗಳಲ್ಲಿ

ಹೊರಬಂದ ಸಮತಾ ವಾರ್ತಾ ಪತ್ರವೇ ಎರಡನೇ ಘಟ್ಟದ ಮಹಿಳಾ ಪತ್ರಿಕೆಗಳಿಗೆ ನಾಂದಿ ಹಾಡಿದ್ದು ! ಸಮತಾ ವಾರ್ತಾ ಪತ್ರಕ್ಕೆ ಯಾವುದೇ ಔಪಚಾರಿಕ ಸಂಪಾದಕರಿಲ್ಲ, ಚಂದಾದಾರರಿಲ್ಲ. ಯಾವುದೇ ಬಗೆಯ ಆರ್ಥಿಕ ಬೆಂಬಲವಿಲ್ಲ. ಸಣ್ಣದಾಗಿ ಹೇಳಬೇಕೆಂದರೆ ಸಮತಾ ಯಾವುದೇ ವ್ಯವಸ್ಥಿತ ರಚನೆಗಳನ್ನು ವಿರೋಧಿಸುತ್ತದೆ. ಪತ್ರಿಕೆ ಮೂಲಕ ಸಂವಾದ ಬೇಕೆಂದು ತುಂಬಾ ತೀವ್ರವಾಗಿ ಅನ್ನಿಸಿದಾಗ ಸಮತಾ ಬಳಗ ಹೇಗೋ ಹಣ ಹೊಂದಿಸಿ (ಅನೇಕ ಸಲ ಕೈಯಿಂದಲೇ ಹಾಕಬೇಕಾಗುತ್ತದೆ) ಕೆಲವು ಪ್ರತಿಗಳನ್ನು ಪ್ರಕಟಿಸುತ್ತಾರೆ. ಹಾಸ್ಟೆಲಿನ ಮಹಿಳೆಯರ ಬದುಕು ಹಾಗೂ ಅತ್ಯಾಚಾರಕ್ಕೆ ಸಂಬಂಧಪಟ್ಟ ವಿಶೇಷ ಸಂಚಿಕೆಗಳನ್ನು ಒಳಗೊಂಡಂತೆ ಈವರೆಗೆ ಆರು ಸಂಚಿಕೆಗಳನ್ನು ಸಮತಾ ಹೊರತಂದಿದೆ.

ವಿಮೋಚನಾ ವಾರ್ತಾ ಪತ್ರ :– ೧೯೭೮ರಲ್ಲಿ ಪ್ರಾರಂಭಗೊಂಡ ವಿಮೋಚನಾ ಬೆಂಗಳೂರಿನಲ್ಲಿ ನೆಲೆಗೊಂಡಿರುವ ಮಹಿಳಾ ಗುಂಪು. ಮಹಿಳೆಯರ ಖಾಸಗಿ ಬದುಕು ಮತ್ತು ಲೈಂಗಿಕ ತುಳಿತದ ವಿಶ್ಲೇಷಣೆಯಲ್ಲಿ ತೊಡಗಿದ ವಿಮೋಚನಾ ಪಿತೃಪ್ರಧಾನ ರಚನೆಗಳನ್ನು ಸ್ಪಷ್ಟ ಟೀಕೆಗೆ ಒಳಪಡಿಸಿತು. ಒಟ್ಟಾರೆಯಲ್ಲಿ, ಮಹಿಳೆಯರ ತುಳಿತ, ಶ್ರಮಶೋಷಣೆ ಲೈಂಗಿಕತೆ ಮತ್ತು ಸಂತಾನೋತ್ಪತ್ತಿಗಳನ್ನು ಅಸ್ಪಷ್ಟವಾಗಿಯಾದರೂ ಸಂಬಂಧಿಸಿ ಹೇಳಲು ತೊಡಗಿದ ಮೊದಲ ಪ್ರಯತ್ನ ವಿಮೋಚನಾದೆನ್ನಬಹುದು. ವಿಮೋಚನಾದ ಒಂದು ಭಾಗವಾಗಿ ಮತ್ತು ಚರ್ಚೆಯ ವೇದಿಕೆಯಾಗಿ ೧೯೮೦ರಲ್ಲಿ "ವಿಮೋಚನಾ ವಾರ್ತಾಪತ್ರ" ಪ್ರಾರಂಭವಾಯಿತು. ದ್ವೈಮಾಸಿಕವಾದ ಇದು ೧೯೮೬ರವರೆಗೂ ಕ್ರಮಬದ್ಧವಾಗಿ ಹೊರ ಬರುತ್ತಿದ್ದು ೮೬ರಿಂದ ೯೦ರವರೆಗೆ ನಿಂತು ಹೋಯಿತು. ೧೯೯೦ರಲ್ಲಿ ಮತ್ತೆ ಪ್ರಾರಂಭವಾಯಿತು.

ವಿಮೋಚನಾ ವಾರ್ತಾ ಪತ್ರಕ್ಕೆ ಸಂಪಾದಕೀಯ ಮಂಡಳಿ, ಸಂಪಾದಕರು ಮತ್ತು ಖಾಯಂ ಚಂದಾದಾರರಿದ್ದಾರೆ. ಪಟ್ಟಣದ ಬುದ್ಧಿಜೀವಿ ಸಂಕುಲ ಹಾಗೂ ಗ್ರಾಮೀಣದ ಮಧ್ಯಮ ವರ್ಗದ ಮಹಿಳೆಯರು ವಾರ್ತಾ ಪತ್ರದ ಓದುಗರು ಎಂದು ತುಂಬಾ ಸ್ಥೂಲವಾಗಿ ಹೇಳಬಹುದು.

ಮಹಿಳಾ ಶೋಷಣೆಗಳ ಸಂಬಂಧದ ವಿಶ್ಲೇಷಣಾತ್ಮಕ ಬರಹಗಳನ್ನು ಹೊಂದಿರುವ ವಾರ್ತಾ ಪತ್ರದ ವಿಷಯ ಬಾಹುಳ್ಯ ತುಂಬಾ ವಿಸ್ತಾರವಾದದ್ದು. ಜಾತಿ ಮತ್ತು ಮಹಿಳೆ, ಸಿನೆಮಾ ಮತ್ತು ಮಹಿಳೆ, ಮಹಿಳೆ ಮತ್ತು ಪ್ರಸಾರ ಮಾಧ್ಯಮಗಳು, ಧರ್ಮ ಮತ್ತು ಮಹಿಳೆ, ಮಹಿಳಾ ದೃಷ್ಟಿಕೋನದಿಂದ ಹಿಂದೂ ಪುರಾಣಗಳ ಮರುವ್ಯಾಖ್ಯೆ, ಮುಸ್ಲಿಂ ಮಹಿಳೆಯರು, ಮಹಿಳೆಯರ ಮೇಲಿನ ಹಿಂಸೆ, ಮಹಿಳೆ ಮತ್ತು ಆರೋಗ್ಯ, ಸಾಹಿತ್ಯ, ಸತಿ ಪದ್ಧತಿ, ಮಹಿಳೆ ಮತ್ತು ಕಾನೂನು ಇತ್ಯಾದಿ ವಿಷಯಗಳನ್ನು ವಾರ್ತಾಪತ್ರ ಚರ್ಚೆಗೆ ತಂದುಕೊಂಡಿದೆ. ಬೇರೆ ದೇಶಗಳಲ್ಲಿನ ಮಹಿಳಾ ಹೋರಾಟಗಳನ್ನು ಕುರಿತ ಲೇಖನಗಳನ್ನು ವಾರ್ತಾಪತ್ರ ಪ್ರಕಟಿಸುತ್ತಾ ಬಂದಿದೆ. ನೈರೋಬಿಯಲ್ಲಿ ನಡೆದ ಅಂತರಾಷ್ಟ್ರೀಯ ಮಹಿಳಾ ಸಮಾವೇಶವನ್ನೂ ಒಳಗೊಂಡಂತೆ ಪ್ರಮುಖ ಸಭೆ/ಸಮಾವೇಶಗಳನ್ನು ವಾರ್ತಾಪತ್ರ ವರದಿ ಮಾಡುತ್ತಾ ಬಂದಿದೆ.

ಅಚಲ :– ಮಹಿಳಾ ಶೋಷಣೆಯ ಸೈದ್ಧಾಂತಿಕ ನೆಲೆಗಳನ್ನು ಗುರುತಿಸುವುದು, ಅಧ್ಯಯನಗಳನ್ನು ನಡೆಸುವುದು, ಮಹಿಳಾ ದನಿಗಳಿಗೆ ಅಭಿವ್ಯಕ್ತಿ ಕೊಡುವುದು ಇಂತಹ ಉದ್ದೇಶಗಳನ್ನು ಹೊಂದಿರುವ 'ಅಚಲಾ' ಪ್ರಾರಂಭವಾದದ್ದು ೧೯೮೫ರಲ್ಲಿ. ಪತ್ರಿಕೆಗೆ ಸಂಪಾದಕರು, ಸಂಪಾದಕೀಯ ಮಂಡಳಿ ಮತ್ತು ಚಂದಾದಾರರ ವ್ಯವಸ್ಥೆ ಇದೆ. ಪಟ್ಟಣದ ಬುದ್ಧಿ ಜೀವಿ ವರ್ಗ ಮತ್ತು ಗ್ರಾಮೀಣ ಮಧ್ಯಮವರ್ಗವನ್ನೂ ಸೇರಿದಂತೆ ಸಾವಿರಕ್ಕೂ ಮಿಕ್ಕಿ ಚಂದಾದಾರರು ಅಚಲಾಗಿದ್ದಾರೆ. ಮಹಿಳೆ–ಸಂಸ್ಕೃತಿ ಹಾಗೂ ಸಾಹಿತ್ಯಕ್ಕೆ ಹೆಚ್ಚು ಒತ್ತು ಕೊಡುವ ಅಚಲಾ ಜರ್ಮೈನ್ ಗ್ರೀರ್, ಕೇಟ್ ಮಿಲೆಟ್ ಮುಂತಾದ ಪಶ್ಚಿಮದ ಹೆಸರಾಂತ ಸ್ತ್ರೀವಾದಿ ಲೇಖಕಿಯರನ್ನು ಓದುಗರಿಗೆ ಪರಿಚಯಿಸಿದೆ. ಈ ಶತಮಾನದ ಪೂರ್ವಾರ್ಧದ ಮಹಿಳಾ ಲೇಖಕಿಯರನ್ನು ಕುರಿತ ಲೇಖನ ಸರಣಿಯನ್ನು ಪ್ರಕಟಿಸಿದ ಹೆಗ್ಗಳಿಕೆ ಅಚಲಾಗೆ ಸಲ್ಲುತ್ತದೆ. ಪುಸ್ತಕ ಮತ್ತು ಕಲಾ ವಿಮರ್ಶೆಗಳು ಅಚಲಾದಲ್ಲಿ ತಪ್ಪದೆ ಪ್ರಕಟವಾಗುವ ಅಂಕಣಗಳು. ಬೆಂಗಳೂರಿನಿಂದ ಈ ಪತ್ರಿಕೆ ಪ್ರಕಟವಾಗುತ್ತದೆ.

ಮಾನಸ ತಿಂಗಳ ಪತ್ರಿಕೆ :– ೧೯೮೬ರಲ್ಲಿ

"ಮಾನವಿ" ಎಂಬ ಹೆಸರಿನಿಂದ ದ್ವೈಮಾಸಿಕವಾಗಿ ಪ್ರಾರಂಭವಾದ ಈ ಪತ್ರಿಕೆ ಏಳು ಸಂಚಿಕೆಗಳ ನಂತರ "ಮಾನಸ ತಿಂಗಳ ಪತ್ರಿಕೆ"ಯಾಯಿತು. ಮಹಿಳೆಯ ರೊಂದಿಗೆ ಅರ್ಥಪೂರ್ಣ ಸಂವಾದ, ಮಹಿಳಾ ಆಂದೋಲನದ ಹೊಸ ದಿಕ್ಕುಗಳ ಹುಡುಕಾಟ, ಶೋಷಿತ ವ್ಯವಸ್ಥೆಯ ವಿವಿಧ ರೂಪಗಳ ಗುರುತಿಸುವಿಕೆ, ಮಹಿಳೆಯರ ಮೇಲೆ ನಡೆಯುವ ಅಮಾನವೀಯ ದೌರ್ಜನ್ಯ, ಹಿಂಸೆಗಳನ್ನು ಬೆಳಕಿಗೆ ತರುವುದು ಮಾನಸದ ಮುಖ್ಯ ಉದ್ದೇಶ. ಮಹಿಳಾ ಸಂಘಗಳು, ಜನಶಿಕ್ಷಣ ನಿಲಯಗಳನ್ನು ಒಳಗೊಂಡಂತೆ ಗಮನಾರ್ಹ ಸಂಖ್ಯೆಯ ಗ್ರಾಮೀಣ ಓದುಗರನ್ನು ಪಡೆದಿರುವ ಮಾನಸ ಸಂಪಾದಕೀಯ ಮಂಡಳಿಯೊಂದನ್ನು ಹೊಂದಿದೆ. ಸ್ತ್ರೀ ಸಂವೇದನೆಯುಳ್ಳ ಪುಸ್ತಕಗಳ ಪರಿಚಯ, ಪ್ರಾರಂಭದ ಬರಹಗಾರರಿಗಾಗಿಯೇ ಅಂಕಣ ಮುಂತಾದವುಗಳ ಜತೆಗೆ ಸಾಹಿತ್ಯ, ಕ್ರೀಡೆ, ಸಿನೆಮಾ, ಕಲೆಗಳನ್ನು ಕುರಿತ ವಿಮರ್ಶೆಗೆ ಮಾನಸ ಸ್ಥಳ ವಿರಿಸುತ್ತದೆ. ಮಹಿಳೆಯರೆಡೆಗಿನ ಗಾಂಧಿ, ಅಂಬೇಡ್ಕರ್, ಲೋಹಿಯಾ ಮುಂತಾದ ಪ್ರಮುಖರ ದೃಷ್ಟಿಯನ್ನು ಮಾನಸ ಪರಿಚಯಿಸಿದೆ.

ಲೇಖಿಕಿ ತ್ರೈಮಾಸಿಕ :– ಕರ್ನಾಟಕ ಬರಹಗಾರ್ತಿಯರ ನೋಂದಾಯಿತ ಸಂಘವಾದ 'ಲೇಖಕಿಯರ ಸಂಘ' ಹೊರತರುವ ತ್ರೈಮಾಸಿಕವೇ ಲೇಖಿಕಿ. ಸುಮಾರು ಐನೂರಕ್ಕೂ ಮಿಕ್ಕಿ ಸದಸ್ಯತ್ವ ಲೇಖಕಿಯರ ಸಂಘಕ್ಕಿದೆ. ಸಂಘದ ಅಧ್ಯಕ್ಷರೇ "ಲೇಖಿಕಿ"ಯ ಸಂಪಾದಕರು. ಸ್ತ್ರೀ ಸಂವೇದನೆಯ ಸಾಹಿತ್ಯ ವಿಮರ್ಶೆ, ಕವನ, ಸಣ್ಣ ಕತೆಗಳು, ಪುಸ್ತಕ ವಿಮರ್ಶೆ ಇವು ಪತ್ರಿಕೆಯ ಸಾಮಾನ್ಯ ಪ್ರಕಟಣೆಗಳು. ಮಹಿಳಾ ಬರಹಗಾರರಿಗೊಂದು ವೇದಿಕೆಯಾಗಿಯೇ ಲೇಖಿಕಿ ಇದೆಯೆಂದು ಹೇಳಬಹುದು. ಲೇಖಿಕಿ ಒಂದು ಮಹಿಳಾ ಸಾಹಿತ್ಯಕ ಪತ್ರಿಕೆ ಎಂದು ಹೇಳಿದರೆ ತಪ್ಪಿಲ್ಲ. ಲೇಖಿಕಿ ಬೆಂಗಳೂರಿನಿಂದ ಪ್ರಕಟಿತ.

ಸಮಖ್ಯಾ ಸಂವಾದ :– ಮಹಿಳಾ ಸಮಖ್ಯಾ ಕರ್ನಾಟಕ ಪ್ರಕಟಿಸುವ ತ್ರೈಮಾಸಿಕ ಸಮಖ್ಯಾ ಸಂವಾದ. ಶಿಕ್ಷಣದ ಮೂಲಕ ಗ್ರಾಮೀಣ ಮಹಿಳೆಯರಲ್ಲಿ ಜಾಗೃತಿ ಮೂಡಿಸುವುದನ್ನು ಉದ್ದೇಶವನ್ನಾಗಿ ಉಳ್ಳ ಮಹಿಳಾ ಸಮಖ್ಯಾ ಕೇಂದ್ರ ಸರ್ಕಾರ ಹಮ್ಮಿಕೊಂಡ ಕಾರ್ಯಕ್ರಮ. ಸಮಖ್ಯಾದ ಮುಖವಾಣಿಯಾಗಿಯೇ ಪ್ರಾರಂಭವಾದ "ಸಮಖ್ಯಾ ಸಂವಾದ" ಕ್ರಮೇಣದಲ್ಲಿ ಬೇರೆ ಬೇರೆ ಅಂಶಗಳ ಚರ್ಚೆಗೂ ಗಮನ ಕೊಡುತ್ತಾ ತನ್ನ ಹರಹನ್ನು ಹೆಚ್ಚಿಸಿಕೊಂಡಿದೆ. 'ಸಂಘಟನೆ'ಯನ್ನು ಒಳಗೊಂಡಂತೆ ಇದುವರೆಗೆ ನಾಲ್ಕು ಸಂಚಿಕೆಗಳು ಹೊರಬಂದಿವೆ.

ಹೀಗೆ ಕರ್ನಾಟಕದ ಮಹಿಳಾ ಪತ್ರಿಕೆಗಳಿಗೆ ೭೫ ವರ್ಷಗಳ ಇತಿಹಾಸವಿದ್ದರೂ ಮತ್ತು ಮುಖ್ಯವಾಗಿ ಇತ್ತೀಚಿನ ಪತ್ರಿಕೆಗಳು ಹಲವಾರು ಮೂಲಭೂತ ಪ್ರಶ್ನೆಗಳನ್ನು ಎತ್ತಲು ಸಾಧ್ಯವಾಗಿದ್ದರೂ ಕೂಡ, ಕರ್ನಾಟಕದ ಬೌದ್ಧಿಕ ಮತ್ತು ಸಾಂಸ್ಕೃತಿಕ ಬದುಕಿನಲ್ಲಿ ಅವಶ್ಯಕ ಛಾಪನ್ನು ಇನ್ನೂ ಮೂಡಿಸಲು ಸಾಧ್ಯವಾಗಿಲ್ಲ ಎಂಬುದು ಕೊನೆಗೂ ನಿಲ್ಲುವ ಸತ್ಯ.

●

ಸ್ತ್ರೀವಾದ ಮತ್ತು ಇಕೋ ಸ್ತ್ರೀವಾದ

ಮಹಿಳೆ, ಪುರುಷ ಮತ್ತು ಪ್ರಕೃತಿಯ ದ್ವಿತ್ವಾತ್ಮಕ ಕಲ್ಪನೆಗಳಾಚೆಗೆ

ವಾಲ್ ಪ್ಲಮ್ ವುಡ್

ಇಕೋ ಸ್ತ್ರೀವಾದವು ಕಳೆದ ಹದಿನೆಂಟು ವರ್ಷಗಳಿಂದ, ಮುಖ್ಯವಾಗಿ ಮಹಿಳೆಯರ ಶಾಂತಿ ಮತ್ತು ಇಕೋಲಾಜಿಕಲ್ ಚಳವಳಿಗಳ ಭಾಗವಾಗಿ ಬೆಳೆದು ಬಂದಿದೆ. ಪಶ್ಚಿಮದಲ್ಲಿ ಮಹಿಳೆಯರು ಮುಖ್ಯವಾಗಿ ಶಾಂತಿ, ಸೌಹಾರ್ದತೆ, ಆರೋಗ್ಯ ಮುಂತಾದ ಇಕೋಲಾಜಿಕಲ್ ಕ್ಷೇತ್ರಗಳಲ್ಲಿ ತುಂಬಾ ಕ್ರಿಯಾಶೀಲರಾಗಿದ್ದರೆ, ಮೂರನೇ ವಿಶ್ವದಲ್ಲಿ ಗ್ರಾಮೀಣ ಉತ್ಪಾದಕರಾಗಿ ಮಹಿಳೆಯರು ತಮ್ಮ ನೆಲ ಮತ್ತು ಮಕ್ಕಳು ಎರಡರ ಕ್ಷೇಮಕ್ಕೂ ಜವಾಬ್ದಾರರಾಗಿದ್ದಾರೆ.

ಇಕೋ ಸ್ತ್ರೀವಾದ ಮೂಲದಲ್ಲಿ ಕ್ರಿಯಾ ಸ್ವರೂಪಿಯಾಗಿದ್ದರೂ ಸಾಹಿತ್ಯ, ಕಲೆ, ಪ್ರಬಂಧಗಳನ್ನು ಒಳಗೊಂಡಂತೆ ಥಿಯರಿಟಿಕಲ್ ನೆಲೆಗಳನ್ನು ಸೃಷ್ಟಿಸಿಕೊಂಡಿದೆ. ಇಕೋಲಜಿಯ ಸಮಸ್ಯೆಗಳನ್ನು ಸ್ತ್ರೀ ದೃಷ್ಟಿ ಕೋನದಿಂದ ನೋಡುವುದರಿಂದ ಸ್ತ್ರೀವಾದದಷ್ಟೇ ಸಂಕೀರ್ಣತೆ ಮತ್ತು ವೈವಿಧ್ಯತೆ ಇದಕ್ಕಿದೆ. ಹಿಂಸೆ,ಶ್ರೇಣೀಕರಣ ಮತ್ತು ಪರಿಸರ ವಿನಾಶಗಳಾಚೆಗಿನ ಸಮಾಜದ ಕಲ್ಪನೆ ಇಕೋ ಫೆಮಿನಿಸ್ಟರ ಸಾಮಾನ್ಯ ದೃಷ್ಟಿ, ಇದಕ್ಕೆ ಬೇರೆ ಬೇರೆ ರಾಜಕೀಯ ತಂತ್ರ ಮತ್ತು ವಿಶ್ಲೇಷಣೆಗಳಿದ್ದರೂ ಕೂಡ.

ಇಕೋ ಸ್ತ್ರೀವಾದದ ಇತ್ತೀಚಿನ ಪ್ರವೃತ್ತಿಗಳನ್ನು ಗಮನಿಸುವಾಗ, ಒಂದು ಅಲೆ ಸಾಂಸ್ಕೃತಿಕ ಅಥವಾ ರ್‍ಯಾಡಿಕಲ್ ಸ್ತ್ರೀವಾದಕ್ಕೆ ಮತ್ತು ಇನ್ನೊಂದು ಅಲೆ ಸಮಾಜವಾದೀ ಅಥವಾ ಅನಾರ್ಕಿಸ್ಟ್ ಸ್ತ್ರೀವಾದಕ್ಕೆ ಹತ್ತಿರದವುಗಳಾಗಿ ಕಾಣುತ್ತವೆ.

ಸಾಂಸ್ಕೃತಿಕ ಇಕೋ ಸ್ತ್ರೀವಾದಿಗಳು ಮಹಿಳೆ ಮತ್ತು ಪ್ರಕೃತಿಯ ನಡುವೆ ಇರುವ ಚಾರಿತ್ರಿಕ, ಜೈವಿಕ ಮತ್ತು ಅನುಭವಾತ್ಮಕ ಸಂಬಂಧಗಳನ್ನು ಎತ್ತಿಹಿಡಿದು, ಇವೆರಡರ ತುಳಿತಕ್ಕೆ ಪುರುಷ ಪ್ರಾಬಲ್ಯವೇ ಕಾರಣವೆಂದು ಪ್ರತಿಪಾದಿಸುತ್ತಾರೆ. ಪುರುಷ ಪ್ರಧಾನತೆ ತುಚ್ಛೀಕರಿಸುವ ಸ್ತ್ರೀ ಗುಣಗಳಿಗೆ ಮರು ಹುಟ್ಟನ್ನು ಕೊಡುವ ಮೂಲಕ ಪರ್ಯಾಯ ಸ್ತ್ರೀ ಸಂಸ್ಕೃತಿಯೊಂದರ ಸೃಷ್ಟಿ ಇವರ ಆಶಯ. ಮಹಿಳೆಯರು ಪ್ರಕೃತಿಯೊಂದಿಗೆ ಉತ್ಕೃಷ್ಟ ಸಂಬಂಧ ಹೊಂದಿದವರೆಂದು ಹೇಳುತ್ತಾ ಪ್ರಕೃತಿಯೊಂದಿಗಿನ ಸಂಬಂಧ ಆಧ್ಯಾತ್ಮಿಕವಾಗಿರಬೇಕೆಂದು ಹೇಳುತ್ತಾರೆ. 'ವಂದನಾಶಿವ'ತಮ್ಮ "ಸ್ಟೇಯಿಂಗ್ ಅಲೈವ್" ಕೃತಿಯಲ್ಲಿ ಈ ದಿಕ್ಕಿನಲ್ಲಿ ಮುಂದೆ ಹೋಗಿ ಇಡೀ ಅಭಿವೃದ್ಧಿಯ ಮಾದರಿಯೇ ಹೇಗೆ ಪುರುಷ ಸ್ವರೂಪಿ ಮತ್ತು ಪ್ರಕೃತಿ/ಸ್ತ್ರೀ ವಿರೋಧಿಯಾದದ್ದೆಂದು ವಾದಿಸುತ್ತಾರೆ. ಅದೇನೇಯಾದರೂ, ಪ್ರಕೃತಿಯೆಡೆಗಿನ ಈ ಹೊಸ ನೋಟ ಹಳೆಯ ತುಳಿತದ ಮಾದರಿಗಳನ್ನು ಪುಷ್ಟೀಕರಿಸುತ್ತದೆಂದು ಬಹು ಮಂದಿ ಇದನ್ನು ಒಪ್ಪುವುದಿಲ್ಲ.

ಸೋಷಿಯಲ್ ಸ್ತ್ರೀವಾದಿಗಳು ಸಾಂಸ್ಕೃತಿಕ ಇಕೋ ಸ್ತ್ರೀವಾದಿಗಳ ಯಾವುದೇ ವಾದವನ್ನು ಒಪ್ಪದೆ, ಇದರ ರಾಜಕೀಯ ಮತ್ತು ಸಾಮಾಜಿಕ ಅಂಶಗಳಿಗೆ ಒತ್ತುಕೊಡುತ್ತಾರೆ. ಮಹಿಳೆ, ವರ್ಗ, ವರ್ಣ, ಜಾತಿ ಇವೆಲ್ಲವುಗಳ ತುಳಿತಕ್ಕೂ ಸಂಬಂಧ ಇದೆ ಎನ್ನುವುದು ಇವರ ವಾದ.

ಇಂತಹ ಹಿನ್ನಲೆಯಲ್ಲಿ, ವಾಲ್ ಪ್ಲಮ್‌ವುಡ್‌ರ ಈ ಲೇಖನ ತುಂಬಾ ಸಂಯಮದಿಂದ ತೂಕ ತಪ್ಪದಂತೆ ಎಚ್ಚರವಿದ್ದು ಸ್ತ್ರೀವಾದದ ವಿಭಿನ್ನ ಬಗೆಗಳನ್ನು ವಿಶ್ಲೇಷಿಸುತ್ತದೆ. ಆ ಮೂಲಕ ಅರ್ಥಪೂರ್ಣ ಮೂರನೇ ಅಲೆಯೊಂದರ ಸ್ವರೂಪವನ್ನು ಕಟ್ಟಿಕೊಡುತ್ತದೆ. "ದ ಇಕೋಲಜಿಸ್ಟ್" ಪತ್ರಿಕೆಯು ಜ/ಫೆ 1992ರ ತನ್ನ ಸಂಚಿಕೆಯಲ್ಲಿ ಪ್ರಕಟಿಸಿದ ಈ ಲೇಖನವನ್ನು ಈ ಕಾರಣಕ್ಕಾಗಿಯೇ ಇಲ್ಲಿ ಅನುವಾದಿಸಿ ಕೊಟ್ಟಿದ್ದೇನೆ.

—ವಿ. ಗಾಯತ್ರಿ

ಪುರುಷನನ್ನು ಸಂಸ್ಕೃತಿಯೊಡನೆ ಮತ್ತು ಮಹಿಳೆಯನ್ನು ಪ್ರಕೃತಿಯೊಡನೆ ಗುರುತಿಸುವುದನ್ನು ಸ್ತ್ರೀವಾದಿಗಳು ತೀಕ್ಷ್ಣವಾಗಿಯೇ ಖಂಡಿಸಿದ್ದಾರೆ. ಇದು ಹೇಗೆ ಮಹಿಳೆ ಮತ್ತು ಪ್ರಕೃತಿಗಳೆರಡರ ಮೇಲಿನ ಪ್ರಭುತ್ವವನ್ನು ಸಮರ್ಥಿಸುತ್ತದೆ ಎಂಬುದನ್ನು ಅವರು ತೋರಿಸಿದ್ದಾರೆ. ಉದಾರವಾದಿ (ಲಿಬರಲ್) ಸ್ತ್ರೀ ವಾದಿಗಳು ಸಾಂಪ್ರದಾಯಿಕ ಸ್ತ್ರೀತ್ವದ ಸಂಕೇತಗಳನ್ನು ಧಿಕ್ಕರಿಸುತ್ತಿರುವ ಮತ್ತು ರ್ಯಾಡಿಕಲ್ ಸ್ತ್ರೀವಾದಿಗಳು ಪುರುಷ ಪ್ರಧಾನ ಮೌಲ್ಯಗಳು ಸ್ತ್ರೀತ್ವದ ಅಂಶಗಳಿಂದ ಪಲ್ಲಟಗೊಳ್ಳಬೇಕೆಂದು ಪ್ರತಿಪಾದಿಸುತ್ತಿರುವ ಈ ಸಂದರ್ಭದಲ್ಲಿ ಇಕೋ ಸ್ತ್ರೀವಾದವು ಪುರುಷ ಮತ್ತು ಸ್ತ್ರೀ ಐಡೆಂಟಿಟಿಗಳೆರಡರ ರಚನೆಯನ್ನು ಎಚ್ಚರಿಕೆಯಿಂದ ಪ್ರಶ್ನಿಸಬೇಕಾಗಿದೆ.

ಪುರುಷತ್ವವನ್ನು ವೈಚಾರಿಕತೆಯೊಡನೆಯೂ, ಸ್ತ್ರೀತ್ವವನ್ನು ಪ್ರಕೃತಿಯೊಡನೆಯೂ ಗುರುತಿಸುವ ಪಶ್ಚಿಮದ ಯುಕ್ತಿಯ ಪರಿಕಲ್ಪನೆಯು ಅಲ್ಲಿನ ಸಂಸ್ಕೃತಿಯಲ್ಲಿ ಮಹಿಳೆಯರ ಮೇಲಿನ ಪ್ರಾಬಲ್ಯಕ್ಕೆ ಮುಖ್ಯ ಬೌದ್ಧಿಕ ತಳಹದಿಯನ್ನು ಒದಗಿಸಿ ಕೊಟ್ಟಿದೆ ಎಂಬ ಅರಿವು ಈಗ ಬೆಳೆಯುತ್ತಿದೆ. ವೈಚಾರಿಕತೆ ಎಂಬುದಕ್ಕೆ ಎಷ್ಟೊಂದು ಅರ್ಥದ ವ್ಯಾಖ್ಯೆಗಳಿವೆಯೋ ಅವೆಲ್ಲ ಪ್ರಕೃತಿಗೆ ಇರುವ ಅಸಂಖ್ಯ ಅರ್ಥದ ವ್ಯಾಖ್ಯೆಗಳಲ್ಲಿ ಒಂದಲ್ಲ ಒಂದಕ್ಕೆ ವಿರೋದಾರ್ಥಗಳಾಗಿಯೇ ನಿಲ್ಲುತ್ತವೆ.

ಪುರುಷ ವೈಚಾರಿಕತೆಯ ಪರಿಧಿಗೆ ಸೇರುವ ಸಾರ್ವಜನಿಕ ಬದುಕು, ಉತ್ಪಾದನೆ, ಸಾಮಾಜಿಕ ಮತ್ತು ಸಾಂಸ್ಕೃತಿಕ ಬದುಕು ಮತ್ತು ವೈಚಾರಿಕ ನ್ಯಾಯ ಇವೆಲ್ಲವನ್ನು ಸ್ತ್ರೀತ್ವದ ಪರಿಧಿಗೆ ಸೇರುವ ಖಾಸಗಿ, ಮನೆ, ಸಂತಾನೋತ್ಪತ್ತಿಯ ಬದುಕು ಇತ್ಯಾದಿಗಳಿಗೆ ವೈರುದ್ಧಿಸಿ ಹೇಳಲಾಗುತ್ತದೆ. ವ್ಯಾವಹಾರಿಕತೆ ಮತ್ತು ಪ್ರಕೃತಿಗಳ ಮೇಲೆ ಮಾನವ ಸ್ವಾತಂತ್ರ್ಯ ಮತ್ತು ನಿಯಂತ್ರಣಗಳನ್ನು ಸಾಧಿಸುತ್ತಾ ಅದಕ್ಕೆ ಮುಖ್ಯವಾಗಿ ವಿಜ್ಞಾನವನ್ನು ಸಾಧನವಾಗಿಸಿಕೊಂಡಿರುವುದು ಪುರುಷ ಪರಿಧಿಯ ಲಕ್ಷಣ. ಇದಕ್ಕೆ ವ್ಯತಿರಿಕ್ತವಾಗಿ ಸ್ತ್ರೀತ್ವವು ನಿರ್ಲಿಪ್ತತೆ, ಬದಲಾಯಿಸಲಾಗದ ಮಾನವ ಪ್ರಕೃತಿ ಮತ್ತು ಸಹಜ ಅವಶ್ಯಕತೆಗಳನ್ನು ಒಪ್ಪಿಕೊಳ್ಳುವುದು ಇತ್ಯಾದಿಗಳನ್ನು ಸಂಕೇತಿಸುತ್ತದೆ.

ವೈಚಾರಿಕತೆಯನ್ನು ಕುರಿತು ಹೇಳುವಾಗಲೆಲ್ಲಾ ಅದರ ವಿಚಾರಶೀಲ ಭಾಗವನ್ನು ತುಂಬಾ ಎತ್ತಿ ಹಿಡಿಯುತ್ತಿದ್ದು ಅದನ್ನೇ ಆದರ್ಶ ಮಾನವ ಗುಣವೆಂಬಂತೆ ನೋಡಲಾಗುತ್ತದೆ. ಸ್ತ್ರೀತ್ವದ ಬಗೆ ಬಗೆಯ ಗುಣಗಳಿಗೆ ಮಹಿಳೆ ಎಷ್ಟು ಬದ್ಧಳಾಗಿರುತ್ತಾಳೋ ಅಷ್ಟರ ಮಟ್ಟಿಗೆ ಆಕೆ ಕೀಳಾಗುತ್ತಾಳೆ, ಕುಂದು ಕೊರತೆಗಳ ಮೂರ್ತಿಯಾಗುತ್ತಾಳೆ ಮತ್ತು ಮನುಷ್ಯರನ್ನು ಪ್ರಾಣಿಗಳಿಗಿಂತ ಮಿಗಿಲಾಗಿ ಮಾಡುವಂತಹ ಗುಣಗಳಾದ ಧೈರ್ಯ, ನಿಯಂತ್ರಣ, ವಿಚಾರಶೀಲತೆ ಮತ್ತು ಸ್ವಾತಂತ್ರ್ಯ ಮುಂತಾದವುಗಳ ತೀವ್ರ ಕೊರತೆಯಿಂದ ನಿಕೃಷ್ಟಳಾಗುತ್ತಾಳೆ. ಆದ್ದರಿಂದಲೇ ವೈಚಾರಿಕತೆ ಹೇಳುವ ಆದರ್ಶ ಸ್ಥಿತಿ ಪುರುಷ ಸ್ವರೂಪಿಯೇ ಎಂದು ತುಂಬಾ ಸ್ಪಷ್ಟವಾಗಿ ಹೇಳಬಹುದು:

ಉಗ್ರ ಪುರುಷ ಮತ್ತು ನಿರ್ಲಿಪ್ತ ಮಹಿಳೆ: ಪ್ರಕೃತಿಯ ಕಲ್ಪನೆ, ಮಹಿಳೆಯರನ್ನು "ಅವರ ಜಾಗದಲ್ಲಿ ಇಡಲು" ಸಂಪ್ರದಾಯವಾದಿಗಳಿಗಿರುವ ಒಂದು ಅತ್ಯಂತ ಶಕ್ತಿಶಾಲಿ ಅಸ್ತ್ರ. ಅಸಮಾನತೆಯನ್ನು ಸಮರ್ಥಿಸಿಕೊಳ್ಳುತ್ತಾ ಮಹಿಳೆಯರ ಬದುಕನ್ನು ನಿರ್ಧರಿಸುವುದು ಪ್ರಕೃತಿಯೇ ಹೊರತು ಅನಿಶ್ಚಿತ ಮತ್ತು ಬದಲಾವಣೆ ಸಾಧ್ಯವಿರುವ ಸಾಮಾಜಿಕ ನಡಾವಳಿಗಳಲ್ಲ. ಪಶ್ಚಿಮದ ಪ್ರಬಲ ಸಂಪ್ರದಾಯ–ಆಚರಣೆಗಳಲ್ಲಿ ಮಹಿಳೆಯರನ್ನು ಮಾನವ ಸಂಕುಲಕ್ಕಿಂತ ಹೆಚ್ಚಾಗಿ ಪ್ರಕೃತಿ ಯೊಂದಿಗೇ ಬೆಸೆಯಲಾಗಿದೆ. ಇಲ್ಲಿ ಬದಲಾವಣಾಶೀಲವಲ್ಲದ ಪುರುಷ ವೀರ್ಯವಂತಿಕೆಯನ್ನು ಉತ್ಪತ್ತಿಶೀಲವೂ, ಹೊಂದಿಸಿ ಕೊಡುವಂತಹದ್ದು ಎಂದು ನೋಡದೆ ಅದನ್ನು ಹಿಂಸಾತ್ಮಕ, ಸ್ಪರ್ಧಾತ್ಮಕ, ಕ್ರೂರ ಮತ್ತು ಲೈಂಗಿಕ ಸ್ವರೂಪವುಳ್ಳದ್ದು ಎಂಬಂತೆ ನೋಡಲಾಗುತ್ತದೆ. ಅದೇ "ಸ್ತ್ರೀ ಎಂಬುದನ್ನು ನಿಸ್ಸಾರವಾದ, ಮನೆಗೆ ಹೊಂದಿಕೊಂಡ, ಲೈಂಗಿಕ ಅಂಶಗಳಿಲ್ಲದ ಸ್ಥಿತಿಯಾಗಿ ಹೇಳಲಾಗುತ್ತದೆ.

ಸಂಪ್ರದಾಯ ಕಟ್ಟಿಕೊಡುವ ಮಹಿಳೆ ಮತ್ತು ಪ್ರಕೃತಿಗಳೆರಡರ ಐಡೆಂಟಿಟಿಯು ಎಲ್ಲಾ ಸಮಯದಲ್ಲೂ

ಸರಳವಾದದ್ದೂ ಅಲ್ಲ, ನೇತ್ಯಾತ್ಮಕವೂ ಅಲ್ಲ. ಅನೇಕ ಸಲ ಮಹಿಳೆ ಮತ್ತು ಪ್ರಕೃತಿಗಳೆರಡರ ಸ್ಥಿತಿಯನ್ನು ದೃಢೀಕರಿಸಲಿಕ್ಕಾಗಿ ಅವೆರಡನ್ನು ಹೀಗೆ ಬೆಸೆದು ಹೇಳಲಾಗಿದೆ. ಮಹಿಳೆಯನ್ನು ಪ್ರಕೃತಿಯೊಟ್ಟಿಗೆ ಬೆಸೆಯುವುದು ಕೆಲಸಮಯಗಳಲ್ಲಿ ಹೊಗಳಿಕೆಯೆಂಬಂತೆನಿಸಿದರೂ ಅದು ಮಹಿಳೆಯರ ಕೀಳರಿಮೆಗೇ ಪುಷ್ಟಿ ಕೊಡುತ್ತಾ, ಅವರನ್ನು ಸೀಮಿತ, ಸತ್ವಹೀನ ಬದುಕಿಗೆ ತಳ್ಳಿಬಿಡುತ್ತದೆ.

ಪರಿಸ್ಥಿತಿ ಹೀಗಿರುವಾಗ, ಅನೇಕ ಸ್ತ್ರೀವಾದಿಗಳು ಹೆಚ್ಚುತ್ತಿರುವ ಇಕೋ ಸ್ತ್ರೀವಾದಿಗಳನ್ನು ಅನುಮಾನದಿಂದಲೇ ನೋಡುವುದರಲ್ಲಿ ಆಶ್ಚರ್ಯವೇನೂ ಇಲ್ಲ. ಪ್ರಕೃತಿಯೊಟ್ಟಿಗೆ ಮಹಿಳೆಯನ್ನು ಬೆಸೆದು ಹೇಳುವ ಕಲ್ಪನೆಯಲ್ಲಿ ಮಹಿಳೆಯರ ಪರವಾದದ್ದೇನಾದರೂ ಕಂಡುಕೊಳ್ಳಲು ಸಾಧ್ಯವಿರಬಹುದು ಮತ್ತು ಪ್ರಕೃತಿ ಮತ್ತು ಮಹಿಳೆಯರ ಮೇಲೆ ಸಾಧಿಸಲಾಗಿರುವ ಪ್ರಭುತ್ವ ಮತ್ತು ಶೋಷಣೆಯ ಸ್ವರೂಪಗಳಲ್ಲಿ ಸಾಮ್ಯವಿದೆ ಎನ್ನುವ ಇಕೋ ಸ್ತ್ರೀವಾದಿಗಳ ನಿಲುವಿಗೆ ಇವರು ಅಷ್ಟೇನೂ ಸೊಪ್ಪು ಹಾಕುವುದಿಲ್ಲ. ಮಹಿಳೆಯರನ್ನು ಪ್ರಕೃತಿಯೊಟ್ಟಿಗೆ ಗುರುತಿಸುವುದೇ ಅನೇಕರಿಗೆ ಅನುಮಾನಕರ ಮತ್ತು ಪ್ರಗತಿ ವಿರೋಧಿ ಸಂಗತಿಯಾಗಿದೆ. ಮಹಿಳೆಯನ್ನು ಹೆಚ್ಚು ನಿರ್ಲಿಪ್ತಗೊಳಿಸುವ, ಸಂತಾನೋತ್ಪತ್ತಿಗೇ ಮೀಸಲುಗೊಳಿಸುವ, ತನ್ಮೂಲಕ ಬದುಕಿನ ಅನುಭವ ಬಾಹುಳ್ಯದಿಂದ ವಂಚಿಸುವ ಸಂಚು ಇದೆಂದು ಇವರ ವಾದ.

ಅದೇಯೇನಾದರೂ, ಪ್ರಕೃತಿ ಮಹಿಳೆಯ ಸಂಬಂಧವನ್ನು ಸಂಪೂರ್ಣ ತಳ್ಳಿಹಾಕಲಾಗದೆಂಬುದಕ್ಕೆ ಅನೇಕ ಕಾರಣಗಳಿವೆ. ಮಿಗಿಲಾಗಿ ಇದನ್ನು ಫೆಮಿನಿಸಂನ ಕೇಂದ್ರ ವಸ್ತುವಾಗಿಯೇ ನೋಡಬೇಕಾಗುತ್ತದೆ. ಮೊದಲನೆಯದಾಗಿ, ಈ ಸಂಬಂಧವನ್ನು ಅರ್ಥಮಾಡಿಕೊಳ್ಳುವುದು ಮುಖ್ಯ ಏಕೆಂದರೆ, ಸಮಕಾಲೀನ ಸಮಾಜದಲ್ಲಿ ಮಹಿಳೆಯನ್ನು ಮತ್ತು ಪ್ರಕೃತಿಯನ್ನು ನಡೆಸಿಕೊಳ್ಳುತ್ತಿರುವ ರೀತಿಯ ಹಿಂದಿನ ಪ್ರಬಲ ಪ್ರೇರಕ ಶಕ್ತಿಯೇ ಇದಾಗಿದೆ. ಎರಡನೆಯದಾಗಿ ಈ ವಿಷಯವನ್ನು ಫೆಮಿನಿಸಂ ಪರಿಗಣಿಸಬೇಕಾದುದು ಮುಖ್ಯ ಏಕಾಗುತ್ತದೆಂದರೆ, ಮಾನವ ಸಂಕುಲದೊಳಕ್ಕೆ ಮಹಿಳೆಯನ್ನು ಒಳಗೊಳ್ಳಿಸಿರುವ ವಿಧಾನವನ್ನು ಪರೀಕ್ಷಿಸಲು ಇಲ್ಲಿ ಕೆಲ ಒಳನೋಟಗಳು ಸಿಗುತ್ತವೆ. ಮೂರನೆಯದಾಗಿ, ಇಕೋ ಸ್ತ್ರೀವಾದವು ಎತ್ತುತ್ತಿರುವ ಪ್ರಶ್ನೆಗಳು ಸ್ತ್ರೀವಾದದ ಮೇಲೆಯೇ ಬೆಳಕು ಚೆಲ್ಲಬಲ್ಲಂತವು. ಸಂಸ್ಕೃತಿಯ ಪುರುಷ ಸ್ವರೂಪವನ್ನು ಮತ್ತು ಪುರುಷ ಪ್ರಧಾನತೆಯ ಬೇರೆ ಬೇರೆ ಮುಖಗಳನ್ನು ಪರಿಶೀಲಿಸುವ ಮೂಲಕ ಅವುಗಳಿಂದ ತಪ್ಪಿಸಿಕೊಳ್ಳುವ ಮಾರ್ಗಗಳನ್ನು ಇದು ಹುಡುಕಬಲ್ಲ ಸಾಧ್ಯತೆಗಳಿವೆ.

ಪ್ರಕೃತಿ ಮತ್ತು ಮಹಿಳೆಯ ನಡುವೆ ಸಂಬಂಧ ತಂದು ಇವೆರಡನ್ನೂ ಕೀಳೆಂಬಂತೆ ನೋಡುವುದು ಕೇವಲ ಹಿಂದೆ ಮಾತ್ರ ಇದ್ದಂತಹದಲ್ಲ. ಇದು ಮುಂದುವರೆಯುತ್ತಲೇ ಪ್ರಕೃತಿ ಮತ್ತು ಮಹಿಳೆಯ ಚಟುವಟಿಕೆಗಳಿಗೆ ಮಸಿಬಳಿಯುತ್ತಾ ಇಡೀ ಸಂತಾನೋತ್ಪತ್ತಿಯ ಪ್ರಕ್ರಿಯೆಯನ್ನೇ ಹೀನಾಯ ಮಾಡುತ್ತಿದೆ. ಮಹಿಳೆಯರು ತಾವು ಪ್ರಕೃತಿಯಂತವರೆಂದು ಅಂದುಕೊಳ್ಳಲಿಕ್ಕೆ ಬಹಿರಂಗವಾದ ವ್ಯಾಖ್ಯೆಗಳು ಬೇಕಾಗಿಲ್ಲ, ಇದು ಖಾಸಗಿ ಮತ್ತು ಸಾರ್ವಜನಿಕ ಬದುಕುಗಳೆರಡರಲ್ಲೂ ಅವರ ಪಾತ್ರಗಳನ್ನು ರೂಪಿಸುವಂತದ್ದಾಗಿರುವಾಗ! ತುಂಬಾ ವ್ಯವಸ್ಥಿತವಾಗಿಯೇ ಮಹಿಳೆಯರನ್ನು ಮನೆಮಡದಿಯರನ್ನಾಗಿ, ಸೆಕ್ರೇಟರಿಗಳಾಗಿ, ದಾದಿಯರಾಗಿ ರೂಪಿಸಲಾಗಿದೆ. ಅವರ ಸಾಂಪ್ರದಾಯಿಕ ಪಾತ್ರಗಳಲ್ಲಿನ ಶ್ರಮಕ್ಕೆ ಆರ್ಥಿಕ ವ್ಯವಸ್ಥೆಯಲ್ಲಿ ಕಿಮ್ಮತ್ತಿಲ್ಲ. ಇದನ್ನು ಮಾನವ ಚರಿತ್ರೆಯೊಳಕ್ಕೆ ಸೇರಿಸಿಕೊಂಡೇ ಇಲ್ಲ. ಸಾಂಪ್ರದಾಯಿಕವಾಗಿ ಮಹಿಳೆಯರೆಂದರೆ 'ಪರಿಸರ.' ಪುರುಷ ಸಾಧನೆಗಳಿಗೆ ಬೇಕಾದ ಪರಿಸರವನ್ನು ಮಹಿಳೆ ಒದಗಿಸಿಕೊಡುತ್ತಾಳೆ. ಆದರೆ ಅವಳೇನೇ ಮಾಡಿದರೂ ಅದು ಸಾಧನೆಯಾಗುವುದಿಲ್ಲ.

ಪುರುಷ ಪ್ರಧಾನ ವ್ಯವಸ್ಥೆ ಪ್ರಕೃತಿ ಮತ್ತು ತಾಯಂದಿರನ್ನು ಅಕ್ಷಯ ಪಾತ್ರೆಯೆಂಬಂತೆ ನೋಡುತ್ತದೆ. ಆದರೆ ಅವರ ಅವಶ್ಯಕತೆಗಳು (ಅಂತವೇನಾದರೂ ಇದ್ದರೆ!) ಮುಖ್ಯವಾಗುವುದೇ ಇಲ್ಲ. ಆಕೆಯ ಬೆಲೆ ಆಕೆ ಜನ್ಮಕೊಡುವ ಮಗುವಿನಿಂದ ನಿರ್ಧರಿತವಾಗುತ್ತದೆ. ಆಕೆಯಿಂದ ಯಾವಾಗಲೂ ಕೆಲಸವನ್ನು ನಿರೀಕ್ಷಿಸಲಾಗುತ್ತದೆಯೇ ಹೊರತು ಅದನ್ನು ಪರಿಗಣಿಸಲಾಗುವುದಿಲ್ಲ. ಆದರ ಕುಶಲತೆ, ಮಹತ್ವ ಮತ್ತು ಅದು ಒಳಗೊಳ್ಳುವ ಕಷ್ಟವನ್ನು ಕಡೆಗಣಿಸಿ ಪ್ರಕೃತಿಯೊಟ್ಟಿಗೆ ವ್ಯಾಖ್ಯಿಸಿ ಬಿಡಲಾಗು

ತ್ತದೆ (ಗರ್ಭಪಾತದ ವಿರುದ್ಧದ ಅನೇಕ ವಾದಗಳಿಗೆ ಎಡೆ ಮಾಡಿಕೊಟ್ಟಿರುವ ತಾಯ್ತನದ ಕಲ್ಪನೆಯೇ ಇದು.) ತಾಯಿ ಮಗುವಿಗೆ ಕಲಿಸುವ ಅತ್ಯಂತ ಮಹತ್ವದ ದೈಹಿಕ, ವೈಯಕ್ತಿಕ ಮತ್ತು ಸಾಮಾಜಿಕ ಕುಶಲತೆಗಳನ್ನು ಪುರುಷ ಸ್ವರೂಪೀ 'ನಿಜ' ಕಲಿಕೆಯ ಹಿನ್ನೆಲೆಯೆಂಬಂತೆಯಷ್ಟೇ ನೋಡಲಾಗುತ್ತದೆ. ಇನ್ನೊಂದು ತಮಾಷೆಯೆಂದರೆ, ತಾಯಿಯನ್ನು ಆಕೆಯ ಮಗುವಿನ ಅಥವಾ ಅದರ ತಂದೆಯ ಸಂಬಂಧಿಯಾಗಿ ಮಾತ್ರ ಹೇಳಲಾಗುತ್ತದೆ. ಇದು ಪ್ರಕೃತಿಯನ್ನು ಮಾನವ ಸಂಕುಲಕ್ಕೆ ಸಂಬಂಧಿಸಿ 'ಪರಿಸರ' ಎಂದು ಕರೆದು ಬಿಡುವ ರೀತಿಯಲ್ಲಿ !

ಮಾನವತ್ವ ಮತ್ತು ಪುರುಷತ್ವ : ಪುರುಷ ಮಹಿಳೆಯರಿಬ್ಬರೂ ಸರಳ, ನಿರುಪದ್ರವಿ ಗುಣಗಳಿಂದ ಸಂಪೂರ್ಣ 'ಮಾನವ' ರಾಗ ಬೇಕಾಗಿರುವುದು ಇಂದಿನ ಪ್ರಶ್ನೆಯಾಗಿರುವಾಗ, ಪ್ರಕೃತಿಯೊಟ್ಟಿಗಿನ ಮಹಿಳೆಯ ಸಂಬಂಧ ಇತ್ಯಾದಿಗಳನ್ನು ಸುಮ್ಮನೆ ಪಕ್ಕಕ್ಕೆ ಸರಿಸಬಿಡಬೇಕೆಂಬುದು ಸ್ತ್ರೀವಾದಿಗಳ ಅಭಿಪ್ರಾಯ. ಆದರೆ 'ಮಾನವೀಯತೆ' ಎಂಬುದು ಏನು ಎನ್ನುವುದೇ ಇಲ್ಲಿ ಸಮಸ್ಯೆ—ಅದೂ ಮಾನವ ಪ್ರಕೃತಿಯ ಸಂಬಂಧದ ವಿಷಯದಲ್ಲಿ !

ಪ್ರಕೃತಿ—ಮಾನವ ವೈರುದ್ಧ್ಯ ಕುರಿತ ಗ್ರಹಿಕೆಗಳು ಮಹಿಳೆಯ ನಿರ್ಲಿಪ್ತ ಗುಣಗಳನ್ನು ಪ್ರಕೃತಿಯೊಟ್ಟಿಗೆ ಬೆಸೆದು ಹೇಳುವಂತದಕ್ಕೆ ಕುರಿತಾದದ್ದು ಮಾತ್ರವಾಗಿರದೆ ಪ್ರಕೃತಿಯ ಮೇಲಿನ ಪುರುಷ ಪ್ರಭುತ್ವದಿಂದ ಬಿಡುಗಡೆಯನ್ನು ಕುರಿತು ಹೇಳುವುದು ಕೂಡ ಆಗಿರುತ್ತದೆ. ಆದರೆ ಪುರುಷ ಮಾದರಿಗಳನ್ನೇ 'ಮಾನವ ಮಾದರಿ'ಗಳೆಂದು ಪರಿಗಣಿಸಲಾಗಿರುವುದರಿಂದ ಅದನ್ನು ಪರೀಕ್ಷೆಗೆ ಒಡ್ಡದೆ ಸುಮ್ಮನೆ ಒಪ್ಪಿಕೊಂಡು ಬಿಡಲಾಗಿದೆ. ಹೀಗಾಗಿ, ಮಹಿಳೆ-ಪ್ರಕೃತಿ ಸಂಬಂಧದ ಹಳೆಯ ಸಂಪ್ರದಾಯವನ್ನು ನಿರಾಕರಿಸಿ ಅದರ ಜಾಗದಲ್ಲಿ ಬೇರೆ ಏನನ್ನೂ ಹೇಳದೇ ಹೋದಾಗ ನಾವು 'ಮಾನವೀಯತೆ' ಎಂಬುದರ ಮತ್ತು ಪ್ರಕೃತಿಯೊಟ್ಟಿಗಿನ ಮಾನವ ಸಂಬಂಧದ 'ಪುರುಷ ಮಾದರಿ'ಯನ್ನೇ ಒಪ್ಪಿ ಅನುಮೋದಿಸಿದಂತಾಗಿ ಬಿಡುತ್ತದೆ. ಪುರುಷ ಮಾದರಿಯನ್ನು ಪ್ರಶ್ನಿಸದೆಯೇ ಉಳಿಯುವ ಸ್ತ್ರೀವಾದ ಆಳ ಕಳಕೊಂಡು ಮೇಲು ಮೇಲಿನದಾಗಿ ಬಿಡುತ್ತದೆ.

ಮಹಿಳೆಯನ್ನು ಪ್ರಕೃತಿಯೊಂದಿಗೆ ಬೆಸೆಯುವುದು ಅವಮಾನಕರವೆಂಬ ಭಾವನೆಯ ಹಿಂದೆ 'ಮಾನವ'ವಲ್ಲದ ಪ್ರಪಂಚ ಏಕೆ ಕೀಳು ಎನ್ನುವುದನ್ನು ಕುರಿತ ವ್ಯಾಖ್ಯೆಗೊಳಪಡದ ಗ್ರಹಿಕೆ ಇದೆ. 'ಅಖಂಡ ಮಾನವೀಯ' ಪರಿಕಲ್ಪನೆಯ ಆಧಾರದ ಮೇಲೆ ಯಾವುದೇ ಸಂಗತಿ ಎಷ್ಟು ಮಾನವೀಯವಾದದ್ದೆಂದು ಅಳೆಯಲಾಗುತ್ತದೆ. ಆದರೆ ಮಾನವತ್ವವನ್ನು, ಹಾಗೆಯೇ ಪುರುಷತ್ವವನ್ನು ಹೊರ ತಳ್ಳಲ್ಪಟ್ಟಿರುವ ಕೀಳುವರ್ಗದೊಂದಿಗೆ ಹೋಲಿಕೆ ಮಾಡುತ್ತಾ ಅವುಗಳ ಘನತೆಯನ್ನು ಕಾಯ್ದುಕೊಳ್ಳಲಾಗಿದೆ.

ಮಹಿಳೆಯರು ಇಕೋಲಾಜಿಕಲ್ ನೈತಿಕತೆಯನ್ನು ಹೊತ್ತುಕೊಳ್ಳಲು ಸಾಧ್ಯವಿಲ್ಲವೆಂದು ಸ್ತ್ರೀವಾದಿಗಳು ಸರಿಯಾಗಿಯೇ ಪ್ರತಿಪಾದಿಸಿದ್ದಾರೆ .ತಾಯ್ತನದ ಹೆಸರಲ್ಲಿ ಇಡೀ ಪ್ರಪಂಚದ ಪಾಪಗಳನ್ನು ಹೆಗಲೇರಿಸಿ ಕೊಳ್ಳುವುದು ಸಾಧ್ಯವಿಲ್ಲ ಎನ್ನುವುದು ಅವರ ನಿಲುವು. ಆದರೆ ಯಾವ ಕಾರಣಕ್ಕೂ ಮಹಿಳೆಯರು ತಾವು ನಿಧಾನವಾಗಿಯಾದರೂ ಮೇಲೇಳುತ್ತಿರುವ ತಮ್ಮ ಕೆಳಮಟ್ಟದ ಸ್ಥಾನಕ್ಕೆ ಮತ್ತೆ ಜೋತುಬೀಳುವುದು ಸಾಧ್ಯವಿಲ್ಲ. ಮೇಲ್ಮುಖದ ಸಾಮಾಜಿಕ ಚಲನೆಯಾಗುವಾಗ, ತಮ್ಮ ಕೆಳಸ್ಥಾನಗಳಿಂದ ಮೇಲೇಳುತ್ತಾ ಹೋಗುವ ಮಂದಿ ಕೊನೆಗೆ ತಮ್ಮ ಹಿಂದಿನ ಸಮುದಾಯದಿಂದಲೇ ತಮ್ಮನ್ನು ತಾವು ಸಂಪೂರ್ಣ ಬೇರ್ಪಡಿಸಿಕೊಂಡು ಬಿಡುತ್ತಾರೆ. ಆದರೆ ಮಹಿಳೆಯರ ಸಂದರ್ಭಕ್ಕೆ ಇದು ಅನ್ವಯಿಸಬೇಕಾದ ಅವಶ್ಯಕತೆಯೇನಿಲ್ಲ.

ಆದರೆ ಬಹುಮಂದಿ ಸಾಂಪ್ರದಾಯಿಕ ಸ್ತ್ರೀವಾದಿಗಳು ಈ ನಿಟ್ಟಿನಲ್ಲಿ ತಮ್ಮ ವಾದಗಳನ್ನು ಹಾಕಿದ್ದಾರೆ. ೧೮ನೇ ಶತಮಾನದ ಪ್ರಭಾವಶಾಲೀ ಸ್ತ್ರೀವಾದಿ "ಮೇರಿ ವೂಲ್ ಸ್ಟೋನ್ ಕ್ರಾಫ್ಟ್"ಳಿಗೆ ಉದಾಹರಣೆಗೆ ಹೇಳಬೇಕೆಂದರೆ, ಮಹಿಳೆಯರು ಆಶಿಸಬೇಕಾಗಿರುವ ಮಾದರೀ ಮಾನವ ಗುಣವೆಂದರೆ, ಆಕೆಯ 'ಮಾನವ'ವಲ್ಲದ ಸೃಷ್ಟಿಯ ವಿರುದ್ಧದ ಒಂದು ವ್ಯಾಖ್ಯೆಯನ್ನು ಹುಟ್ಟುಹಾಕುವುದೇ ಆಗಿದೆ. ಆಕೆ ಹೇಳುತ್ತಾರೆ "ಮಾನವವಲ್ಲದ ಸೃಷ್ಟಿಯ ಮೇಲಿನ ಮಾನವನ ಔನತ್ಯವಾದರೂ ಎಂತದ್ದು ? ಇದು ಇಡಿಯಾದುದು ಅರ್ಧಕ್ಕಿಂತ ಕಮ್ಮಿ ಎನ್ನುವಷ್ಟೇ ಸ್ಪಷ್ಟ." ಆಕೆ ಮುಂದುವರಿಯುತ್ತಾ :

"ಭಾವೋದ್ವೇಗಗಳನ್ನು ನೆಲೆಗೊಳಿಸುವುದಾದರೂ ಏಕೆ ? ಇದರೊಟ್ಟಿಗೆ ಹೋರಾಡುತ್ತಾ 'ಮಾನವ' 'ಮಾನವ ವಲ್ಲವದಕ್ಕೆ' ದಕ್ಕಲಾರದ ಜ್ಞಾನದ ಮಟ್ಟಗಳನ್ನು ತಲುಪಲೆಂದು".

"ನಮ್ಮ ಸ್ವಭಾವದಲ್ಲಿನ ಪರಿಪೂರ್ಣತೆ ಮತ್ತು ಸಂತೋಷವಾಗಿರಬಲ್ಲಂಥ ಯೋಗ್ಯತೆಗಳು ನಮ್ಮಲ್ಲಿನ ಯುಕ್ತಿ, ವರ್ಚಸ್ಸು ಮತ್ತು ಮಾನವೀಯತೆಗಳಿಂದ ಅಳೆಯಲ್ಪಡಬೇಕು. ಯುಕ್ತಿಯನ್ನು ಬೆಳೆಸುವುದರಿಂದಲೇ ವರ್ಚಸ್ಸು ತಾನೇ ತಾನಾಗಿ ಹರಿಯುತ್ತದೆ..."

ವೂಲ್‌ಸ್ಟೋನಳು ಸ್ತ್ರೀ ಗುಣಗಳ ಮಾದರಿಗಳನ್ನು ನಿರಾಕರಿಸುತ್ತಾಳೆ, "ದುರ್ಬಲ ಮನಸ್ಸಿನ ಹೀನಸ್ಥಿತಿ, ಮನೋಹರವಾದ ಸಂವೇದನೆ, ನಮ್ರ ನಡವಳಿಕೆ" ಇತ್ಯಾದಿಗಳು. ಬದಲಾಗಿ ಆಕೆ ಮಹಿಳೆಯರು "ಹೆಚ್ಚು ವೀರ್ಯವಂತರೂ ಮತ್ತು ಗೌರವಾನ್ವಿತರು" ಆಗಬೇಕೆಂದು ಬಯಸುತ್ತಾಳೆ. ಸಾರ್ವತ್ರಿಕವಾದ ಮಾದರಿಯೊಂದನ್ನು ಹುಟ್ಟುಹಾಕುವಲ್ಲಿ ಎರಡೂ ಲಿಂಗಗಳೂ ತೊಡಗಿಸಿಕೊಳ್ಳಬೇಕು. ಇದಕ್ಕೆ ಕೆಲವು ಸಣ್ಣ ಬದಲಾವಣೆಗಳಾಗಬೇಕಾಗುತ್ತದೆ. ಪುರುಷನು ಸ್ತ್ರೀ ಗುಣಗಳನ್ನು ಹೊಂದಲೋಸುಗ ಹೆಚ್ಚು ವಿನಯವಂತನೂ, ಪರಿಶುದ್ಧನೂ ಆಗಬೇಕಾಗುತ್ತದೆ.

'ಅವಿಮರ್ಶಿತ ಸಮಾನತೆ'ಯ ಸ್ತ್ರೀವಾದ

ಈ ರೀತಿಯಲ್ಲಿ ಹಿಂದಿನ ಸ್ತ್ರೀವಾದ, ಮತ್ತು ೬೦ ಮತ್ತು ೭೦ ದಶಕಗಳಲ್ಲಿ ತನ್ನ ಛಾಪನ್ನು ಮೂಡಿಸಿದ ಸ್ತ್ರೀವಾದದ ಅಲೆ, ಮಹಿಳೆಯರನ್ನು ಪುರುಷ ಸ್ವರೂಪೀ ಮಾನವ ಮಾದರಿಯೊಳಕ್ಕೆ ಹೊಂದಿಸಲು ಪ್ರಯತ್ನಿಸಿತು. ಈ ಧೋರಣೆಯು ಈ ಹೊತ್ತಿನ ಲಿಬರಲ್ ಸ್ತ್ರೀವಾದದ ಜತೆಗೆ ತುಂಬಾ ಹೊಂದಿಕೊಳ್ಳುತ್ತದೆ, ಸೋಶಿಯಲ್ ಸ್ತ್ರೀವಾದ ಮಾರ್ಕ್ಸ್‌ವಾದೀ ಸ್ತ್ರೀವಾದ ಮತ್ತು ಸೋಶಿಯಲ್ ಇಕಾಲಜಿಯ ಜತೆಗೆ ಸ್ವಲ್ಪ ಮಟ್ಟಿಗೆ ಹೊಂದಿಕೊಳ್ಳುವದಾದರೂ ಕೂಡ. ಇದರ ಕಾರ್ಯತತ್ಪರತೆಯ ತಂತ್ರವೂ ಕೂಡ ಅವಿಮರ್ಶಿತ ಸಮಾನತೆಯನ್ನೇ ಹೇಳುತ್ತದೆ. ಇದು ಪುರುಷ ವಲಯ ಮತ್ತು ಪುರುಷ ಸಂಸ್ಥೆಗಳೊಳಗಡೆಗೆ ಪ್ರವೇಶ ಕೇಳುವುದೇ ಆಗಿದ್ದು, ಇಲ್ಲಿನ ಟೀಕೆ ಇರುವುದು ಇಂತಹ ಕಡೆಗಳಿಂದ ಮಹಿಳೆಯರನ್ನು ಹೊರಗಿಟ್ಟಿರುವುದರ ವಿರುದ್ಧವಷ್ಟೇ !

ಈ ಬಗೆಯ ತಂತ್ರದಿಂದ, ಮಹಿಳೆಯರು ತಮ್ಮನ್ನು ವಿಶೇಷವಾಗಿ ಹೊರಗಿಟ್ಟಿರುವ ವಿಜ್ಞಾನ ಮತ್ತು ತಂತ್ರಜ್ಞಾನ ಕ್ಷೇತ್ರಗಳಲ್ಲಿ ಪುರುಷರೊಟ್ಟಿಗೆ ಸಮವಾಗಿ ಭಾಗವಹಿಸುವಂತಾಗುತ್ತದೆ. ಇದು ಪುರುಷ ಪ್ರಪಂಚದ ವಸ್ತುನಿಷ್ಠತೆ, ಅಮೂರ್ತತೆ, ವೈಚಾರಿಕತೆ ಮತ್ತು ಭಾವನಾತ್ಮಕತೆಯ ದಮನ ಇತ್ಯಾದಿಗಳಿಗೆ ಹೊಂದಿಕೊಂಡು ಬಿಡುವುದು ಮಾತ್ರವಲ್ಲ, ಪ್ರಕೃತಿಯ ಮೇಲಿನ ನಿಯಂತ್ರಣವನ್ನು ಸಾಧಿಸಿ ಅದರೊಡನೆ ಹೋರಾಡುವುದು ಕೂಡ ಆಗುತ್ತದೆ. ಈ ತಂತ್ರ ಪ್ರಯೋಗದಿಂದ ಮಹಿಳೆಯರು ವಿಜ್ಞಾನ ವಿಶ್ವದೊಳಕ್ಕೆ ಪ್ರವೇಶ ಪಡೆಯುತ್ತಾರೆ, ಅಂದ ಮಾತ್ರಕ್ಕೆ ಇಲ್ಲಿ ಬದಲಾವಣೆಯಾಗುತ್ತದಂದಲ್ಲ. ವಿಜ್ಞಾನವು ಪ್ರಕೃತಿಯ ಮೇಲೆ ಹಿಡಿತ ಹೊಂದಿರುವ ತನ್ನ ಸ್ವರೂಪವನ್ನು ಕಾಯ್ದುಕೊಂಡೇ ಹೋಗುತ್ತದೆ.

ವಿಶೇಷ ಸವಲತ್ತುಗಳುಳ್ಳಂತಹ ಕೆಲವರನ್ನು ಹೊರತು ಪಡಿಸಿದರೆ, ಇಂತಹ ರಚನೆಯೊಳಗಡೆಯಲ್ಲಿ 'ಮಹಿಳೆಯರಿಗೆ ಸಮಾನತೆ' ಎನ್ನುವುದು ಭ್ರಮೆಯೇ ಸರಿ. ವ್ಯಕ್ತಿಗತವಾದ ಮತ್ತು ಸಾಮಾಜಿಕ ಸಂಸ್ಥೆಗಳೆರಡರಲ್ಲಿನ ಪುರುಷ ಮಾದರಿಯು ಮಹಿಳೆಯರನ್ನು ಸಂಪೂರ್ಣ ಹೊರಗುಳಿಸುವ ಮೂಲಕ ಆಕೆಯ ಬದುಕಿನ ರೀತಿಗಳನ್ನು ಅಪಮೌಲ್ಯಗೊಳಿಸಿ, ಸ್ತ್ರೀ ಸಂವೇದನೆಯೆಂಬುದನ್ನು ಸಂಪೂರ್ಣ ಕಡೆಗಣಿಸಿಯೇ ನಿರ್ಮಿತಗೊಂಡದ್ದು. ಜಿನೇವೈ ಲಾಯ್ಡ್ ಹೇಳುವಂತೆ : "ಸ್ತ್ರೀತ್ವಕ್ಕೆ ವಿರುದ್ಧವಾಗಿಯೇ ವ್ಯಾಖ್ಯಿಸಲ್ಪಟ್ಟಿರುವ ಸಾಂಸ್ಕೃತಿಕ ಮಾದರಿಯೊಳಗಡೆ ಮಹಿಳೆ ಸ್ಥಾನ ಪಡೆಯಲು ಸಾಧ್ಯವೇ ಇಲ್ಲ."

ಪುರುಷ ಮಾದರಿಯೊಳಕ್ಕೆ ಮಹಿಳೆ ಸೇರಿಕೊಳ್ಳುತ್ತಾ ಹೋಗುವ ಕ್ರಿಯೆ ಸಾಕಷ್ಟು ಯಶಸ್ವಿಯಾಗಿದ್ದಾಗ್ಯೂ ಇದು ಇಕೋ ಸ್ತ್ರೀವಾದಿಗಳಿಗೆ ಒಪ್ಪಿತವಲ್ಲ. ಏಕೆಂದರೆ, ಈ ಕ್ರಿಯೆಯಲ್ಲಿ ಅಪಾರ ಸಂಖ್ಯೆಯ ಸ್ತ್ರೀ ಸಮುದಾಯ ಹೊರಕ್ಕೇ ಉಳಿಯುತ್ತದೆ. ಪ್ರಭುತ್ವವನ್ನು ಪ್ರಶ್ನಿಸದೆಯೇ ಪ್ರಬಲ ವರ್ಗದೊಂದಿಗೆ ಮಹಿಳೆಯರು ಸೇರಿಕೊಳ್ಳುತ್ತಾ ಹೋಗುವುದು ಒಂದು ತಂತ್ರ. ಬೇರೆ, ಬೇರೆ ಬಗೆಯ ಪ್ರಭುತ್ವಗಳು ಒಂದಕ್ಕೊಂದು ಬೆಂಬಲವಾಗಿ ನಿಲ್ಲುತ್ತವೆ ಎಂಬಂಶವನ್ನು ಈ ತಂತ್ರ

ರಾಜ ಪರಬ: ಭೂಮಿ ಋತುವಾಗುವ ಹಬ್ಬ

ಬೇಸಿಗೆಯ ಕೊನೆ ಮತ್ತು ಮಳೆಗಾಲದ ಪ್ರಾರಂಭದಲ್ಲಿ ಭೂಮಿ ಮುಟ್ಟಾಗುತ್ತಾಳೆಂದು ಒರಿಸ್ಸಾದ ಹಳ್ಳಿಗರು ನಂಬುತ್ತಾರೆ. ಬೇಸಿಗೆಯಲ್ಲಿ ಸುಡು ಸುಡುವ ಸೂರ್ಯನ ಶಾಖಕ್ಕೆ ಭೂಮಿ ಒಣಗಿ ನಿಷ್ಫಲವಾದಂತಾದಾಗ, ಸಹಜವಾಗಿಯೇ ಬೆಳೆ ಬೆಳೆಯಲಾಗದು. ಭೂಮಿ ಮತ್ತೆ ಮೆದುವಾಗಿ ಬೀಜ ಹೊಂದಲು ಸಾಧ್ಯವಾಗಬೇಕಾದರೆ ಮೊದಲ ಮಳೆ ಬರಬೇಕು. ಭೂಮಿ ಒಣಗಿ ಬಿರುಬಿದ್ದ ಮತ್ತು ಮಳೆ ಬಿದ್ದು ಮೆದುವಾದ ನಡುವಿನ ದಿನಗಳಲ್ಲಿ 'ರಾಜ ಪರಬ' ಹಬ್ಬ ಬರುತ್ತದೆ.

ಆಡು ಭಾಷೆಯಲ್ಲಿ ಕೂಡ 'ಋತು' ಎಂದರೆ ಕಾಲಗಳು ಮತ್ತು ಹೆಣ್ಣು ಮುಟ್ಟಾಗುವುದು ಎರಡರ ಹೇಳುವಿಕೆಯೂ ಆಗುತ್ತದೆ. ಒರಿಸ್ಸಾದ ಹಳ್ಳಿಗಳ ಮಹಿಳೆಯರೇ ಹೇಳುವಂತೆ:

"ಈ ಹಬ್ಬ ಬಹು ಪಾಲು ನಮ್ಮ ಮುಟ್ಟಿನ ಸಂಕಟದ್ದೇ. ಈ ಹಬ್ಬದ ಸಮಯದಲ್ಲಿ ನಮ್ಮಲ್ಲಿ ಋತುಸ್ರಾವವೊಂದಿರುವುದಿಲ್ಲ ಅಷ್ಟೆ. ಆದರೆ ನಾವು ಮುಟ್ಟಾದ ಸಮಯದಲ್ಲಿ ಆಚರಿಸುವ ಎಲ್ಲಾ ಕಟ್ಟಳೆಗಳನ್ನು ಅನುಸರಿಸುತ್ತೇವೆ. ಈ ಸಮಯದಲ್ಲಿ ಭೂಮಿತಾಯಿ ಮುಟ್ಟಾಗುತ್ತಾಳೆ. ನಾವು "ಅವಳಂತವರೇ" ಆದ್ದರಿಂದ ಮುಟ್ಟಾಗುವಾಗಿನ ಎಲ್ಲಾ ಕಟ್ಟಳೆಗಳನ್ನು ಅನುಸರಿಸುತ್ತೇವೆ. ಅವಳು ಹೆಂಗಸು, ಹಾಗೆಯೇ ನಾವು. ನಾವಾಗ ಕೆಲಸ ಮಾಡುವುದಿಲ್ಲ. ಮರಗಳಿಗೆ ಹಗ್ಗ ಕಟ್ಟಿ ಜೋಕಾಲಿ ಆಡುತ್ತೇವೆ, ಇಸ್ಪೀಟಾಡುತ್ತೇವೆ. ಅವಳಿಗೆ ನೋವಾಗದಿರಲೆಂದು ಬರಿಗಾಲಿನಲ್ಲಿ ನಡೆಯುವುದಿಲ್ಲ. ನಾವು ಸಿಂಗರಿಸಿಕೊಂಡು ಗೆಳತಿಯರೊಡನೆ ಹಾಡಿ ನಲಿಯುತ್ತೇವೆ. ನಾವು ನಮ್ಮ ದೇಹದ ಬಗ್ಗೆ ಕಾಳಜಿ ಕೊಟ್ಟು ವಿರಮಿಸುವಾಗ ನಮ್ಮ ಮನಸ್ಸೂ ಮೆದುವಾಗುತ್ತದೆ ಜನ ನಮ್ಮನ್ನು ಇಷ್ಟ ಪಡುತ್ತಾರೆ. ಇಂತಹ ಸ್ಥಿತಿಯಲ್ಲಿ ನಾವು ನಮ್ಮ ಗಂಡಂದಿರನ್ನು ಪ್ರೀತಿಸುತ್ತೇವೆ. ಹೀಗೆ ಉಂಟಾಗುವ ಸಂತಾನೋತ್ಪತ್ತಿಯ ಫಲವಾದ ಮಕ್ಕಳು ಶಕ್ತಿಶಾಲಿಗಳೂ, ಆರೋಗ್ಯವಂತರೂ ಆಗಿರುತ್ತಾರೆ. ನಮ್ಮ ಗಂಡಸರು ಹೀರಾಚಂದಿ ದೇವತೆಗೆ ಕುರಿ, ಆಡುಗಳ ಬಲಿಕೊಟ್ಟು ಒಲಿಸಿಕೊಳ್ಳಲು ಪೂಜಿಸುತ್ತಾರೆ. ನಾವು, ಹೆಂಗಸರೂ ಕೂಡ ಭೂಮಿತಾಯಿಯನ್ನು ಸಂತೋಷ ಪಡಿಸಲು ಸಾಧ್ಯವಾಗುವಂತಹ ಪಲ್ಲವನ್ನೂ ಕೊಡುತ್ತೇವೆ. ಸಂಪ್ರೀತಳಾದ ಆಕೆ ಸಮೃದ್ಧವಾಗಿ ತೊಡುವ ಫಲದಿಂದಲೆ ನಮ್ಮ ಬದುಕು ತಾನೇ!"

ರಾಜ ಪರಬದ ಸಮಯದಲ್ಲಿ ಗ್ರಾಮದ ಗಂಡಸರೆಲ್ಲಾ ಸೇರಿ ಊರ ಹೊರಗಿನ ಹೀರಾಚಂದಿ ದೇವಿಯ ಗುಡ್ಡದಲ್ಲಿ ಬಿಡಾರ ಹೂಡುತ್ತಾರೆ ಹೀಗೆ ಮಾಡುವುದಕ್ಕೆ ಅವರು ಕೊಡುವ ಕಾರಣವೆಂದರೆ:
"ನಾವು ಗಂಡಸರೆಲ್ಲಾ ಈ ಹಬ್ಬದ ಸಮಯದಲ್ಲಿ ಇಲ್ಲಿಗೆ ಬರಬೇಕು. ನಾವು ಹಳ್ಳಿಯಲ್ಲಿರುವಂತಿಲ್ಲ ನಮ್ಮ ಹೆಂಗಸರೆಲ್ಲಾ ಹಳ್ಳಿಯಲ್ಲಿರುತ್ತಾರೆ, ಇದು ಅವರ ಹಬ್ಬ, ಅವರು ಇದನ್ನು ಆನಂದಿಸುತ್ತಾರೆ. ಹೆಂಗಸರು ಈಗ ಏನೂ ಕೆಲಸ ಮಾಡುವುದಿಲ್ಲ. ಅವರು ತರಕಾರಿ, ಹಲ್ಲುಜ್ಜುವ ಕಡ್ಡಿ ಮೊದಲ್ಗೊಂಡು ಏನ್ನೊಂದನ್ನೂ ಕೊಯ್ಯುವುದಿಲ್ಲ. ಅವರು ರುಬ್ಬುವುದನ್ನಾಗಲೀ, ಕುಟ್ಟುವುದನ್ನಾಗಲೀ ಮಾಡುವುದಿಲ್ಲ. ಅವರ ತಂದೆ–ತಾಯಿಗಳು ಅವರಿಗೆ ತಿಂಡಿ, ತಿನಿಸು, ಬಟ್ಟೆ–ಬರೆ, ಅಲಂಕಾರ ಸಾಮಗ್ರಿಗಳನ್ನು ಉಡುಗೊರೆಯಾಗಿ ಕಳಿಸುತ್ತಾರೆ. ಅವರು ಜೋಕಾಲಿ ಜೀಕುತ್ತಾರೆ, ಹಾಡಿ–ಕುಣಿದು ಕುಪ್ಪಳಿಸುತ್ತಾರೆ. ತೀರಾ ಮುದುಕಿಯರನ್ನು ಬಿಟ್ಟರೆ ಗ್ರಾಮದ ಪ್ರತಿ ಹೆಂಗಸರೂ ಸಂಭ್ರಮಿಸುತ್ತಾರೆ. ನಾವು ಎಲ್ಲ ಬೇಸಾಯದ ಕೆಲಸವನ್ನೂ ನಿಲ್ಲಿಸಿ ಇಲ್ಲಿಗೆ ಬಂದು ಬಿಡುತ್ತೇವೆ. ನಾವೂ ಆನಂದಿಸುತ್ತೇವೆ."

ಗಣನೆಗೆ ತಂದುಕೊಳ್ಳುವುದಿಲ್ಲ. ಇದೇ ಪ್ರಭುತ್ವದ ಕಲ್ಪನೆಯೇ "ಅನಾಗರಿಕ" ಜನ, ಮಹಿಳೆಯರು, ಶ್ರಮಿಕರು ಮತ್ತು ಯೂರೋಪಿಯನ್ನರಲ್ಲದೇ ಇರುವವರು ಒಟ್ಟಾರೆಯಲ್ಲಿ ಎಲ್ಲಾ "ಪಶು ಸಮಾನರಾದವರ" ಸಂಬಂಧದಲ್ಲೂ ತಲೆ ಎತ್ತುತ್ತದೆ.

ಆದ್ದರಿಂದ ಪ್ರಸ್ತುತದ ಸ್ತ್ರೀವಾದವು ಪುರುಷ ಮತ್ತು ಮಾನವ ಮಾದರಿಗಳನ್ನು ಕೂಲಂಕುಶ ವಿಮರ್ಶೆಗೆ ಒಡ್ಡಬೇಕು. ಹಿಂದಿನ ಸ್ತ್ರೀವಾದಿಗಳು ಎತ್ತಿ ಹಿಡಿದ "ಮಹಿಳೆ ಪುರುಷನಷ್ಟೇ ಸಮಾನವಾಗಿ "ಮಾನವಳು" ಎಂಬ ಸಂಸ್ಕೃತಿಯು ಪುನರ್ ಪರಿಶೀಲನೆಯಾಗಬೇಕು. ಆದರೆ, ಮಾನವತ್ವ ಮತ್ತು ಮಾನವ ಸಂಸ್ಕೃತಿಯ, ಜತೆಗೆ "ವೈಚಾರಿಕ ವ್ಯಕ್ತಿ" ಯನ್ನು ಕುರಿತ ಪ್ರಬಲ ಕಲ್ಪನೆಗಳನ್ನು ಟೀಕೆಗೆ ಒಳಪಡಿಸಿದಾಗ ಮಾತ್ರ ಇದು ಸಾಧ್ಯ.

ಅವಿಮರ್ಶಿತ ಪ್ರತಿಮುಖ ಸ್ತ್ರೀವಾದ

ಸಾಂಸ್ಕೃತಿಕ ಇಲ್ಲವೇ ರ್‍ಯಾಡಿಕಲ್ ಸ್ತ್ರೀವಾದವೆಂದು ಈವರೆಗೆ ಕರೆಯಲ್ಪಟ್ಟ ಸ್ತ್ರೀವಾದವು, ಅವಿಮರ್ಶಿತ ಸಮಾನತೆಯನ್ನು ಹೇಳುವ ಸ್ತ್ರೀವಾದಕ್ಕೆ ವಿಮರ್ಶೆಯಾಗಬಲ್ಲದು, ಮುಖ್ಯ ಪ್ರತಿಸ್ಪರ್ಧಿಯಾಗಬಲ್ಲುದು. ಉದಾರವಾದೀ (ಲಿಬರಲ್) ಸ್ತ್ರೀವಾದವು ಸಾಂಪ್ರದಾಯಿಕ ಸ್ತ್ರೀ ಗುಣಗಳ ಮಾದರಿಯನ್ನು ನಿರಾಕರಿಸುವಂತದ್ದೆಂದು ಹೇಳಬಹುದಾದರೆ, ರ್‍ಯಾಡಿಕಲ್ ಸ್ತ್ರೀವಾದವು (ಕೆಲಮಟ್ಟಕ್ಕೆ ಸೋಷಲಿಸ್ಟ್ ಸ್ತ್ರೀವಾದ ಕೂಡ) ಪುರುಷ ಸ್ವರೂಪೀ ಮಾದರಿಗಳನ್ನು ಮತ್ತು ಪ್ರಬಲ ಸಂಸ್ಕೃತಿಯ ಪುರುಷತ್ವವನ್ನು ನಿರಾಕರಿಸುವಂತದ್ದು.

ಈ ಸಾಂಸ್ಕೃತಿಕ ವಿಮರ್ಶೆಯ ಪ್ರಕಾರ, ಪಾಶ್ಚಾತ್ಯ ಸಂಸ್ಕೃತಿಯ ಪ್ರಬಲ ಅಂಶಗಳು ಪ್ರಾಕೃತಿಕವಾದ ಮತ್ತು ಸ್ತ್ರೀ ಸ್ವರೂಪಿಯಾದ ಅಂಶಗಳನ್ನು ಅಪಮೌಲ್ಯಗೊಳಿಸಿ, ಹೊರತಳ್ಳಿ, ಅವುಗಳನ್ನು ನಿಯಂತ್ರಿಸುತ್ತಲೇ ರೂಪುಗೊಂಡಿರುವಂತವು. ರ್‍ಯಾಡಿಕಲ್ ಸ್ತ್ರೀವಾದಿಗಳು ಪುರುಷ ಐಡೆಂಟಿಟಿಯನ್ನು (ಸ್ವಲ್ಪ ಮಟ್ಟಕ್ಕೆ ಪುರುಷ ದೈಹಿಕತೆ ಕೂಡ) ಸಹಮಾನವರೆಡೆಗಿನ, ಮುಖ್ಯವಾಗಿ ಮಹಿಳೆಯರೆಡೆಗಿನ ಮತ್ತು ಪ್ರಕೃತಿಯೆಡೆಗಿನ ಕ್ರೌರ್ಯಕ್ಕೆ ಸಂಬಂಧಿಸಿ ಹೇಳುತ್ತಾರೆ ಪ್ರಕೃತಿಯೊಟ್ಟಿಗೆ ಒಂದುಗೂಡಿಸುವ ಮೂಲಕ ಮಹಿಳೆಯರನ್ನು ಅವಮಾನಿಸಲಾಗಿದ್ದು ಇದರಿಂದ ಅವರಿಗೆ ಘಾಸಿಯಾಗಿದೆಯಾದರೆ, ಪ್ರಕೃತಿಯಿಂದ ದೂರ ಉಳಿದು, ಅದರೊಟ್ಟಿಗೆ ಸಂಪರ್ಕವೇ ಇಲ್ಲದೆ ಹೋಗಿ, ಯಾವಾಗಲೂ ಅದರ ವಿರೋಧಿಗಳಾಗಿಯೇ ಉಳಿಯುವುದರಿಂದ ಪುರುಷರಿಗೂ ಅಷ್ಟೇ ಘಾಸಿಯಾಗಿದೆ ಎಂಬ ಗ್ರಹಿಕೆ ಈ ಟೀಕೆಯಲ್ಲಿದೆ. ಸಂಸ್ಕೃತಿಯು ತನ್ನ ಪುರುಷೀಕರಣದಿಂದ ಮತ್ತು ಸಂತಾನೋತ್ಪತ್ತಿ ವಲಯದ ನಿರಾಕರಣೆಯಿಂದ ಸೊರಗಿದೆ. ಆದ್ದರಿಂದ ಮಹಿಳೆಯರಿಗೆ ತಮ್ಮ ನಿಜ ವಿಮೋಚನೆಯೆನ್ನುವುದು ಇಂತಹ ಸಂಸ್ಕೃತಿಯೊಳಗಡೆ ತೂರಿಕೊಳ್ಳುವುದಲ್ಲ. ಬದಲಾಗಿ ಇದನ್ನು ಮುಗುಚಿಹಾಕುವುದು ತಡೆದು ನಿಲ್ಲುವುದು ಮತ್ತು ಪರ್ಯಾಯ ಹುಡುಕುವುದು ಆಗಿದೆ.

ಈ ವಿಮರ್ಶೆಯು ಸ್ತ್ರೀತ್ವ ಮತ್ತು ಪ್ರಕೃತಿಗಳಿಗೆ ಒಂದು ಇತ್ಯಾತ್ಮಕ ಮತಾಲ್ಯವನ್ನು ಕಟ್ಟಿಕೊಡುವ ತಂತ್ರದಿಂದ ಪುರುಷ ಪ್ರಾಬಲ್ಯ ಸಂಸ್ಕೃತಿಯ ಸಮಸ್ಯೆಯನ್ನು ನಿರ್ವಹಿಸಬಲ್ಲಂತ ಇಕೋ ಸ್ತ್ರೀವಾದ ಮತ್ತು ಇಕೋ ರ್‍ಯಾಡಿಕಲ್ ಸ್ತ್ರೀವಾದಗಳ ಬೇರೆ ಬೇರೆ ರೀತಿಗಳ ಹುಟ್ಟು ಹಾಕಿದೆ. ಹೀಗೆ "ಸ್ತ್ರೀಕರಣ" ಗೊಳಿಸುವ ತಂತ್ರವು ಪುರುಷ ಗುಣ ಮಾದರಿಯನ್ನು ನಿರಾಕರಿಸಿ, ಎರಡೂ ಲಿಂಗಗಳಿಗೂ ಅನ್ವಯಿಸುವಂತಹ ಒಂದು ಸ್ತ್ರೀ ಸ್ವರೂಪೀ ಪ್ರತಿಸ್ಪರ್ಧಿಯನ್ನು ಸ್ಥಾಪಿಸುತ್ತದೆ ಅನೇಕ ಘೋಷಣೆಗಳಲ್ಲಿ ಇದರ ತಿರುಳಿದೆ. ಉದಾ:- "ಭವಿಷ್ಯತ್ತು ಸ್ತ್ರೀ ಸ್ವರೂಪೀ," "ಆಡಮ್ ಒಂದು ರಫ್ ಡ್ರಾಫ್ಟ್ ಈವ್ ಒಂದು ಫೇರ್ ಕಾಪೀ." ಆದರೆ ಅವಿಮರ್ಶಿತವಾದ ಪ್ರತಿಮುಖದ ಸ್ತ್ರೀವಾದವು ಅವಿಮರ್ಶಿತ ಸಮಾನತೆಯ ಸ್ತ್ರೀವಾದದಷ್ಟೇ ಸಮಸ್ಯಾತ್ಮಕ. ಇದು ಹೊಸ ಬಗೆಯಲ್ಲಿ ಮತ್ತು ಸೂಕ್ಷ್ಮ ನೆಲೆಗಳಲ್ಲಿ ಮಹಿಳೆಯರ ತುಳಿತದ ಮುಂದುವರೆದ ರೀತಿ ಆಗಿ ಬಿಡುತ್ತದೆ.

ವಿರೂಪಗೊಳಿಸುವ ದ್ವಿತ್ವಾತ್ಮಕತೆ

ಸ್ತ್ರೀ ಮತ್ತು ಪ್ರಕೃತಿಯ ಮತಾಲ್ಯಗಳನ್ನು ಪ್ರತಿಮುಖಗೊಳಿಸುವ ಪ್ರಯತ್ನದ ಹಿಂದೆ ಇರುವ ಸಮಸ್ಯೆಯನ್ನು ಅರ್ಥ ಮಾಡಿಕೊಳ್ಳಲು ದ್ವಿತ್ವಾತ್ಮಕ

ಕತೆಯು ಕಲ್ಪನೆ ಕೇಂದ್ರವಾದದು. ಪ್ರಾಬಲ್ಯತೆ ಮತ್ತು ಗುಲಾಮಿಕೆಗಳಿಂದ ಪರಸ್ಪರ ವಿರುದ್ಧದ ಕಲ್ಪನೆಗಳು ಉಂಟಾಗುವ ಪ್ರಕ್ರಿಯೆಯೇ ದ್ವಿತ್ವಾತ್ಮಕತೆ. ಅನೇಕ ಸ್ತ್ರೀವಾದಿಗಳು ಪುರುಷತ್ವ ಮತ್ತು ಸ್ತ್ರೀತ್ವಗಳೆರಡೂ ಹೇಗೆ ದ್ವಿತ್ವಾತ್ಮಕವಾದವು ಮತ್ತು ಅವೆರಡರ ದಿಕ್ಕುಗಳೂ ಹೇಗೆ ಬೇರೆ ಬೇರೆಯಾದವೆಂದು ತೋರಿಸಿಕೊಟ್ಟಿದ್ದಾರೆ. ಅಲಿಸನ್ ಜಗ್ಗರ್ ಬರೆಯುವಂತೆ

"ಪುರುಷ ಪ್ರಧಾನ ಸಂಸ್ಕೃತಿಯು' ಎಲ್ಲಾ ಸ್ತ್ರೀವಾದಿಗಳೂ ಗಮನಿಸಿಕೊಂಡಿರುವ ಹಾಗೆ ಪುರುಷತ್ವ ಮತ್ತು ಸ್ತ್ರೀತ್ವಗಳೆರಡನ್ನೂ ಪರಸ್ಪರ ವಿರುದ್ಧವುಗಳಾಗಿ ವ್ಯಾಖ್ಯಿಸುತ್ತದೆ. ಇವತ್ತಿನ ಸಮಾಜದಲ್ಲಿ ಪುರುಷರು ಕ್ರಿಯಾಶೀಲರು ಮತ್ತು ಮಹಿಳೆಯರು ನಿರ್ಲಿಪ್ತರು; ಪುರುಷರು ಬುದ್ಧಿ ಜೀವಿಗಳು ಮತ್ತು ಮಹಿಳೆಯರು ಊಹಾಪೋಹಗಳನ್ನವಲಂಬಿಸುವವರು; ಪುರುಷರು ಗಂಭೀರರು ಮತ್ತು ಮಹಿಳೆಯರು ಭಾವುಕರು; ಪುರುಷರು ಗಟ್ಟಿಗರು ಮತ್ತು ಮಹಿಳೆಯರು ದುರ್ಬಲರು; ಪುರುಷರು ಪ್ರಬಲರು ಮತ್ತು ಮಹಿಳೆಯರು ಅಧೀನರು ....; ಇತ್ಯಾದಿಯಾಗಿ ಚಿತ್ರಿಸಲಾಗಿದೆ. ಇದು ಯಾವ ಮಟ್ಟ ಮುಟ್ಟುತ್ತದೆಂದರೆ ಪುರುಷ ಮತ್ತು ಮಹಿಳೆಯರು ಇಂತಹ ವ್ಯಾಖ್ಯೆಗೆ ಒಳಪಟ್ಟಾಗ ಪರಸ್ಪರ ಪರಕೀಯರೇ ಆಗಿಬಿಡುತ್ತಾರೆ. ಸ್ತ್ರೀತ್ವ ಮತ್ತು ಪುರುಷತ್ವಗಳ ಕಲ್ಪನೆಯು ತಮ್ಮದೇ ಸಾಮರ್ಥ್ಯಗಳನ್ನು ಬೆಳೆಸಿಕೊಳ್ಳುತ್ತಾ ಅವರನ್ನು ಒತ್ತಾಯ ಪೂರ್ವಕವಾಗಿ ಬೇರೆ ದಿಕ್ಕುಗಳಲ್ಲಿ ಬಹು ದೂರ ಕೊಂಡೊಯ್ದು ಬಿಡುತ್ತದೆ. ಉದಾ:- ಪುರುಷರು ಅತೀವ ಸ್ಪರ್ಧಾತ್ಮಕ ಮನೋಭಾವ ಹೊಂದಿ ಇತರರಿಂದ ಕಡಿದುಕೊಂಡರೆ ಮಹಿಳೆಯರು ಪೋಷಣೆಯ ಮತ್ತು ತರಬೇತಿಯ ವಿಪರೀತ ಸ್ಥಿತಿಗಳನ್ನು ತಲುಪಿ ಬಿಡುತ್ತಾರೆ:"

ಅನೇಕ ಸ್ತ್ರೀವಾದಿ ಮತ್ತು ಇಕೋ ಸ್ತ್ರೀವಾದೀ ಚಿಂತಕರು ತೋರಿಸಿ ಕೊಟ್ಟಿರುವಂತೆ ದ್ವಿತ್ವಾತ್ಮಕತೆಯು ಶ್ರೇಣೀಕರಣದ ತಾರ್ಕಿಕತೆಯ ರೂಪದಲ್ಲಿ ಭಿನ್ನತೆಗಳನ್ನು ರಚಿಸುವ ರೀತಿಯೇ ಆಗಿದೆ. ಇಲ್ಲಿ ತುಂಬಾ ಬೆಲೆಯುಳ್ಳದ್ದು (ಉದಾ: ಪುರುಷ) ತುಂಬಾ ಕೀಳೆಂದು ಪರಿಗಣಿತವಾಗಿರುವುದಕ್ಕೆ (ಉದಾ: ಮಹಿಳೆ) ಸಂಪೂರ್ಣ ಪರಕೀಯವೆಂಬಂತೆಯೇ ರಚಿತಗೊಳ್ಳುತ್ತದೆ. ಆದರೆ ಇವೆರಡೂ ಮಾನವ ಕುಲದ ಮುಂದುವರಿಕೆಗೆ ಬೇಕಾದ ಗುಣಗಳ ಕೊರತೆ ಹೊಂದಿವೆ ಎಂದೇ ನೋಡಲಾಗಿದೆ. ರೋಸ್ ಮೇರಿ ರೂಥರ್ ಅವರ ಮಾತುಗಳಲ್ಲಿ ದ್ವಿತ್ವಾತ್ಮಕತೆಯ ಪರಿಣಾಮವೆಂದರೆ: "ಪ್ರಾಬಲ್ಯವನ್ನು ಸಹಜಗೊಳಿಸುವುದು, ಪ್ರಬಲ ಮತ್ತು ಅಧೀನಗಳೆಂಬುದು ಅನಿವಾರ್ಯ ಮತ್ತು ಸಹಜ ಎಂಬಂತೆ ಮಾಡಿ ಬಿಡುವುದು"

ದ್ವಿತ್ವಾತ್ಮಕತೆಯು ತನ್ನ ಪ್ರಕ್ರಿಯೆಯಲ್ಲಿ, ತಾನು ಒಡೆದು ಬೇರೆ ಮಾಡುವ ಎರಡೂ ಭಾಗಗಳನ್ನೂ ಯಜಮಾನ-ಗುಲಾಮ, ಅಹಂಕಾರೀ– ತನ್ನತನವೇ ಇಲ್ಲದಿರುವವರು ತಿರುಚುತ್ತದೆ. ಇದು ಹೀಗಿರುವುದೇ ಆದರೆ ನಾವು ಪ್ರತಿಮುಖಗೊಳಿಸುವ ಸರಳ ತಂತ್ರದಿಂದ ಸಮಸ್ಯೆಗೆ ಪರಿಹಾರ ಹುಡುಕಲು ಸಾಧ್ಯವಿಲ್ಲ, ಏಕೆಂದರೆ ನಾವು ಗುಲಾಮ ಸಂಸ್ಕೃತಿ ಇಲ್ಲವೇ ನಡಾವಳಿಗಳನ್ನು ಸ್ಥಾಪಿಸ ಹೋಗುವುದಾದರೆ, ಅವು ಸ್ವತಂತ್ರವಾಗಿ ರೂಪುಗೊಂಡವುಗಳಾಗಿರದೆ, ಯಜಮಾನ ಸಂಸ್ಕೃತಿ ಮತ್ತು ನಡಾವಳಿಗಳ ಪ್ರತಿಬಿಂಬವೇ ಆಗಿರುತ್ತವೆ.

ಹೀಗಾಗಿ ಪ್ರತಿಮುಖ ಧೋರಣೆಯು, ಮಹಿಳೆಯರು ಒಪ್ಪಿಕೊಳ್ಳಲಾರದಂತಹ ಎರಡು ಆಯ್ಕೆಗಳ ನಡುವೆಯೇ ಕೆಲಸ ಮಾಡುತ್ತದೆ. ಒಂದು, ಸ್ತ್ರೀತ್ವ ಮತ್ತು ಪ್ರಕೃತಿಯ ವಿರುದ್ಧವಾಗಿಯೇ ರೂಪುಗೊಂಡಿರುವ ಪುರುಷ ಸಂಸ್ಕೃತಿಯನ್ನು ಸೇರಿಕೊಳ್ಳುವುದು, ಇಲ್ಲಾ ಸಂಪೂರ್ಣ "ಮಾನವ" ವಲ್ಲದ, ನಿರ್ಲಿಪ್ತವಾದ ಹಳೆಯ ದ್ವಿತ್ವಾತ್ಮಕಗೊಂಡ ಸಂಸ್ಕೃತಿಯನ್ನು ಒಪ್ಪಿಕೊಳ್ಳುವುದು. ಇಂತಹ ಪ್ರತಿಮುಖ ಧೋರಣೆಯು, ಮಹಿಳೆಯನ್ನು ಪ್ರಕೃತಿಯೊಟ್ಟಿಗೆ ಬೆಸೆಯುವ ಮೂಲಕ ಉಂಟಾಗಿರುವ ದಮನಕಾರೀ ವಿವರಗಳನ್ನು ನಿರಂತರಗೊಳಿಸುತ್ತದೆ. ಇದು ಸ್ತ್ರೀವಾದಕ್ಕೆ ಒಂದಿಷ್ಟೂ ಹೊಂದಿಕೊಳ್ಳುವುದಿಲ್ಲವೆಂದು ಅನೇಕರು ಸರಿಯಾಗಿಯೇ ಪ್ರತಿಪಾದಿಸಿದ್ದಾರೆ. ದ್ವಿತ್ವಾತ್ಮಕ ಗ್ರಹಿಕೆಗಳನ್ನು ಟೀಕಿಸುವಂತಹ ಒಂದು ಧೋರಣೆ, ಮಹಿಳೆಯರನ್ನು ಸಂಪೂರ್ಣ ಮಾನವರಂತೆಯೂ ಮತ್ತು ಪುರುಷರಂತೆಯೇ ಸಂಸ್ಕೃತಿಯ ಸಂಪೂರ್ಣ ಭಾಗವೆಂಬಂತೆ ನೋಡಬೇಕೆಂದೂ ಹೇಳುತ್ತದೆ. ಆದರೆ ಎರಡೂ ಲಿಂಗಗಳೂ ಮಾನವ ಐಡೆಂಟಿಟಿಯನ್ನು ಪ್ರಕೃತಿಯಿಂದ

ಬೇರ್ಪಡಿಸದೆಯೇ ಅದರೊಟ್ಟಿಗೆ ಹಾಸು–ಹೊಕ್ಕನ್ನು ಹೊಂದಿರುವಂತಹ ಒಂದು ಪರ್ಯಾಯ ಸಂಸ್ಕೃತಿಯನ್ನು ಹುಟ್ಟು ಹಾಕಬೇಕೆಂದೂ ಇದು ಸ್ಪಷ್ಟ ಪಡಿಸುತ್ತದೆ. ಈ ಬಗೆಯ ಬೆಳವಣಿಗೆಯಿಂದ ಪ್ರಕೃತಿಯನ್ನು ನಿರ್ಲಿಪ್ತ, ಜಡ ಮತ್ತು ಯಾಂತ್ರಿಕವೆಂಬಂತೆ ನೋಡುವ ಕೆಟ್ಟ ನೀತಿ ಪ್ರಶ್ನಿಸಲ್ಪಡುತ್ತದೆ.

ಆದ್ದರಿಂದ, ಮಾನವತ್ವವನ್ನು ಪುರುಷತ್ವದೊದಿಗಿನ ಬೆಸುಗೆಯಿಂದ ಮುಕ್ತಗೊಳಿಸಬೇಕೆನ್ನುವುದರ ಅರ್ಥ ಅದಕ್ಕೆ ಪ್ರತಿಸ್ಪರ್ಧಿಯಾದ ಸ್ತ್ರೀ ಮಾದರಿಯೊಂದರ ಜತೆಗೆ ಅದನ್ನೂ ಬೆಸೆಯಬೇಕೆನ್ನುವುದಲ್ಲ. ಪ್ರಕೃತಿ–ಸಂಸ್ಕೃತಿಗಳೆಂಬ ಭಿನ್ನತೆಯನ್ನು ಲಿಂಗದೊಳಕ್ಕೆ ತಂದಿರುವ ಪಶ್ಚಿಮದ ನೀತಿಯಿಂದ ಪುರುಷ ಮತ್ತು ಮಹಿಳೆಯರಿಬ್ಬರಿಗೂ ಘಾಸಿಯಾಗಿದೆ, ವಿರೂಪವಾಗಿದೆ ಎಂದು ನೋಡಲು ಸಾಧ್ಯವಿದೆ. ಅಂದ ಮಾತ್ರಕ್ಕೆ ಮಹಿಳೆ ಮತ್ತು ಪುರುಷರಿಬ್ಬರ ಪರಿಸ್ಥಿತಿಗೂ ನಾವು ಮರುಗುತ್ತಾ ಇಬ್ಬರೂ ಸಮಾನವಾಗಿಯೇ ಬಲಿಪಶುಗಳೆಂದು ಪರಿಗಣಿಸುವುದು ಅಥವಾ ರಚನಾತ್ಮಕ ಬದಲಾವಣೆಗಳಲ್ಲಿ ಇಬ್ಬರನ್ನು ಒಂದೇ ರೀತಿಯಲ್ಲಿ ನೋಡಬೇಕೆನ್ನುವುದು ಇಲ್ಲಿನ ಅರ್ಥವಲ್ಲ. ಆದರೆ ಈಗಿರುವಂತಹ ಸ್ಥಿತಿಯಲ್ಲಿ, ಎರಡೂ ಲಿಂಗಗಳೂ ಸೂಕ್ತ ಪರ್ಯಾಯದ ಮಾದರಿಯೊಂದನ್ನು ಸುಲಭದಲ್ಲಿ ಕೊಡಲು ಸಾಧ್ಯ ಎನ್ನುವುದೂ ಇಲ್ಲಿನ ಅರ್ಥವಲ್ಲ. ಪುರುಷ, ಸ್ತ್ರೀ ಐಡೆಂಟಿಟಿಗಳೆರಡೂ ಮರುಚಿಂತನೆಗೆ ಒಳಪಡಬೇಕು. ದ್ವಿತ್ವಾತ್ಮಕತೆಯನ್ನು ಮುರಿಯುವುದೆಂದರೆ, ಪ್ರಕೃತಿ ಮತ್ತು ಮಾನವ ಐಡೆಂಟಿಟಿಗಳೆರಡರ ಮರು ಸಿದ್ಧಾಂತವನ್ನು ಹುಟ್ಟು ಹಾಕುವುದು, ಜತೆಗೆ ಅವೆರಡರ ನಡುವಿನ ಸಾಮರಸ್ಯ ಸಂಬಂಧ ಎಂದಾಗುತ್ತದೆ.

ಸ್ತ್ರೀವಾದದ ಮೂರನೇ ಅಲೆ

ಇಕೋ ಸ್ತ್ರೀವಾದವನ್ನು ಅನೇಕತೆಯುಳ್ಳದ್ದು, ಭಿನ್ನವಾದದ್ದು, ಕೆಲಸಾರಿ ಸಂಘರ್ಷಣಾತ್ಮಕವಾದದ್ದು, ರಾಜಕೀಯ ಬದ್ಧತೆಯುಳ್ಳದ್ದು, ಅಭಿವೃದ್ಧಿಯಲ್ಲಿ ಬೇರೆ ಬೇರೆ ಮಟ್ಟಗಳನ್ನು ಹೊಂದಿರುವಂತದ್ದೆಂದು ಒಪ್ಪಿಕೊಳ್ಳಬೇಕಾಗಿದೆಯಾದರೂ, ಮಹಿಳೆ ಮತ್ತು ಪ್ರಕೃತಿಗಳ ಗ್ರಹೀತ ಕೀಳರಿಮೆಯ ಮತ್ತು ಯುಕ್ತಿ, ಮಾನವತ್ವ ಮತ್ತು ಸಂಸ್ಕೃತಿಗಳ ಮೇಲರಿಮೆಯ ನಿರಾಕರಣೆಯೇ ಎಲ್ಲಾ ಇಕೋ ಸ್ತ್ರೀವಾದಿಗಳು ಸಾಮಾನ್ಯವಾಗಿ ಹೊಂದಿರುವ ಧೋರಣೆಯಾಗಿದೆ. ಅವಿಮರ್ಶಿತ ಪ್ರತಿಮುಖದ ಸ್ತ್ರೀವಾದವು ಪ್ರಕೃತಿಯ ಗ್ರಹೀತ ಕೀಳರಿಮೆಯನ್ನೂ ನಿರಾಕರಿಸುವಾಗ, ಮಹಿಳೆ ಪ್ರಕೃತಿ ಮತ್ತು ಸಂಸ್ಕೃತಿ / ಪ್ರಕೃತಿಗಳ ದ್ವಿತ್ವಾತ್ಮಕ ರಚನೆಯನ್ನು ಪ್ರಶ್ನಿಸುವುದಿಲ್ಲ. ಒಂದು ಸಂಪೂರ್ಣವಾದ ಮತ್ತು ವಿಮರ್ಶಾತ್ಮಕವಾದ ಸ್ತ್ರೀವಾದವು, ಸಮಾನತೆಯ ಸ್ತ್ರೀವಾದ ಮತ್ತು ಪ್ರತಿಮುಖಿ ಸ್ತ್ರೀವಾದಗಳೆರಡನ್ನ ಮೀರಿ ಪುರುಷ ಮತ್ತು ಸ್ತ್ರೀ ಐಡೆಂಟಿಟಿಗಳೆರಡರ ದ್ವಿತ್ವಾತ್ಮಕ ರಚನೆಯನ್ನು ಮತ್ತು ಮಾನವತ್ವದ ಪರಿಕಲ್ಪನೆಯನ್ನು ಪ್ರಶ್ನಿಸುತ್ತದೆ.

ಇಂತಹ ಇಕೋ ಸ್ತ್ರೀವಾದವು ಸ್ತ್ರೀವಾದೀ ನಿಲುವಿಗೆ ಒಪ್ಪಿತವಾಗದ ಯಾವುದೇ ಕಲ್ಪನೆಗಳನ್ನು ಹೊಂದಿರದೆ, ಹಿಂದಿನಿಂದಲೂ ಮತ್ತು ಇಂದೂ ಮಹಿಳೆಯರ ತುಳಿತಕ್ಕೆ ಕೇಂದ್ರ ಬಿಂದುವಾಗಿರುವ ಪ್ರಕೃತಿಯ ಸ್ವರೂಪವನ್ನು ಹೆಚ್ಚು ಸರಿಯಾಗಿ ಗ್ರಹಿಸುವ ಮೂಲಕ ಸ್ತ್ರೀವಾದೀ ಚಿಂತನೆಯ ಪೂರ್ಣ ಪ್ರಮಾಣದ ಬೆಳವಣಿಗೆಗೆ ಪ್ರತಿನಿಧಿಯಾಗಬಲ್ಲುದು. ಒಂದು ರಾಜಕೀಯ ಚಳವಳಿಯಾಗಿ ಇದು, ಮಹಿಳೆಯರು ಪ್ರಕೃತಿಯೊಂದಿಗಿನ ತಮ್ಮ ಸಂಬಂಧದಲ್ಲಿ ಶಕ್ತಿಹೀನ ಬೆಸೆಯುವಿಕೆಯ ಆಚೆಗೆ ನಿಂತು, ಸಂಸ್ಕೃತಿಯಿಂದ ಅವರನ್ನು ಹೊರಗಿಟ್ಟಿರುವ ಹಳೆಯ ವಿಚಾರಗಳ ವಿರುದ್ಧದ ಪ್ರತಿಕ್ರಿಯೆಗಳನ್ನು ಮೀರಿ, ಪ್ರಕೃತಿಯನ್ನು ವಿಚ್ಛಿದ್ರಕಾರೀ ಮತ್ತು ಸಂಸ್ಕೃತಿಯ ದ್ವಿತ್ವಾತ್ಮಕ ಸ್ವರೂಪಗಳ ವಿರುದ್ಧವಾಗಿ ಎತ್ತಿ ಹಿಡಿದು ತಮ್ಮೆಡೆಗೆಯೇ ಒಂದು ಪ್ರಜ್ಞಾಪೂರ್ವಕ ಮತ್ತು ಪರೀಕ್ಷಣಾತ್ಮಕವಾದ ಕ್ರಿಯಾಶೀಲ ಮನೋಭಾವವನ್ನು ಬೆಳೆಸಿಕೊಳ್ಳುವುದೇ ಆಗಿದೆ.

ದ್ವಿತ್ವಾತ್ಮಕತೆಯ ವಿಮರ್ಶೆಯನ್ನು ಗಣನೆಗೆ ತಂದು ಕೊಳ್ಳುವ ಇಕೋ ಸ್ತ್ರೀವಾದವು ಹೆಚ್ಚು ಸಮಗ್ರವಾದುದಾಗಿದ್ದು, ಸ್ತ್ರೀವಾದೀ ಥಿಯರಿಯ ಸಾಂಪ್ರದಾಯಿಕ ವಿಭಾಗೀಕರಣವನ್ನು ಮೀರಿ ಸ್ತ್ರೀವಾದದ ಒಂದು ಮೂರನೇ ಅಲೆ ಅಥವಾ ಘಟ್ಟವನ್ನು ಹುಟ್ಟು ಹಾಕಬಲ್ಲುದು. ಇದೊಂದು ಎಲ್ಲಿಂದಲೋ ಹುಟ್ಟಿ ಬಂದ ದುರ್ಬಲವಾದ ಅಲೆಯಾಗಿರದೆ, ಬೇರೆ ಬೇರೆ ವಿಧದ ಇತರ ಸ್ತ್ರೀವಾದಗಳ ಕೆಲಸದ ಮೇಲೆ ಕಟ್ಟಲ್ಪಟ್ಟಿದ್ದಾಗಿರುತ್ತದೆ, ಹಾಗಾಗುವುದರಿಂದಲೇ ಎಲ್ಲದರ

ಜತೆಗೂ ಒಂದು ರೀತಿಯ ಒಪ್ಪಂದ–ಹೊಂದಾಣಿಕೆ ಹೊಂದಿರುತ್ತದೆ. ಮಹಿಳೆಯರನ್ನು ಮಾನವ ಸಂಸ್ಕೃತಿಯ ಭಾಗವೆಂಬಂತೆ ಸಂಪೂರ್ಣವಾಗಿ ಸಮಗ್ರಗೊಳಿಸುವಲ್ಲಿ ಇದು ಪ್ರಾರಂಭದ ಮತ್ತು ಲಿಬರಲ್ ಸ್ತ್ರೀವಾದದಿಂದ ಪ್ರೇರಣೆ ಪಡೆಯುತ್ತದೆ. ಸೋಷಲಿಸ್ಟ್ ಸ್ತ್ರೀವಾದದ ಸಹಾಯದಿಂದ ಇದು ಅಧಿಕಾರ ಮತ್ತು ಪ್ರಾಬಲ್ಯಗಳ ಪ್ರಕ್ರಿಯೆ ಮತ್ತು ರಚನೆಗಳನ್ನು ಅರ್ಥ ಮಾಡಿಕೊಳ್ಳಬಹುದು. ರ್ಯಾಡಿಕಲ್ ಸ್ತ್ರೀವಾದದಿಂದ ಪ್ರಬಲ ಸಂಸ್ಕೃತಿಯ ಪುರುಷ ಸ್ವರೂಪದ ಮೇಲಿನ ಟೀಕೆಯನ್ನು ಮತ್ತು ಇದನ್ನು ಪಲ್ಲಟಗೊಳಿಸುವ ಆಶಯಗಳನ್ನು ತೆಗೆದುಕೊಳ್ಳಬಹುದು ಹಾಗೆಯೇ ಯಾವುದು ಹೀನಗೊಳಿಸಲ್ಪಟ್ಟಿತ್ತೋ ಅದರ ಗುಲಾಮಿಕೆಯನ್ನು ತಪ್ಪಿಸಿ ಅದಕ್ಕೊಂದು ಘನತೆ ತಂದುಕೊಡುವತ್ತ ಒಳನೋಟಗಳನ್ನು ಪಡೆಯಬಹುದ.

ಈ ಮೂರನೇ ಅಲೆಗೆ ಸ್ತ್ರೀವಾದವನ್ನು ಇತರ ಸಾಮಾಜಿಕ ಚಳವಳಿಗಳೊಂದಿಗೆ ಬೆಸೆಯುವ ಬಹುಮುಖ್ಯ ಪಾತ್ರವೂ ಇದೆ. ಪಾಶ್ಚಿಮಾತ್ಯ ಸಂಸ್ಕೃತಿಯ ಗುಣವಾಗಿರುವ ದ್ವಿತ್ವಾತ್ಮಕತೆಯು ತನ್ನಲ್ಲಿನ ದಮನಕಾರೀ ಗುಣ, ಹರಕೀಯುಗೊಳಿಸುವ ಗುಣ ಮತ್ತು ಪ್ರಾಬಲ್ಯಗಳಿಗೆ ತುಂಬಾ ಮುಖ್ಯವಾಗಿ ಹೊಂದಿಕೊಳ್ಳುತ್ತದೆ. ಯುಕ್ತಿಯ ಪ್ರಾಬಲ್ಯದೊಟ್ಟಿಗೆ ಇದಕ್ಕೆ ತಾತ್ತ್ವಿಕವಾದ ಬೆಸುಗೆ ಇದೆ. ಹೀಗಾಗಿ ಮಾನವ | ಪ್ರಕೃತಿ, ಪುರುಷ | ಮಹಿಳೆ, ಯುಕ್ತಿ | ಭಾವುಕತೆ, ನಾಗರೀಕ | ಅನಾಗರೀಕ, ಮೆದುಳು | ದೇಹ ಮತ್ತು ಮಾನಸಿಕ | ಶ್ರಮಿಕ ಈ ದ್ವಿತ್ವಾತ್ಮಕತೆಗಳು ಪ್ರಕೃತಿ, ಮಹಿಳೆ, ವರ್ಣ ಮತ್ತು ವರ್ಗಗಳ ಮೇಲಿನ ಪ್ರಾಬಲ್ಯವನ್ನು "ಸಹಜ"ಗೊಳಿಸಿವೆ, ಇವುಗಳ ತರ್ಕ ಮತ್ತು ಪರಸ್ಪರಿಕತೆಯನ್ನು ಅರ್ಥಮಾಡಿಕೊಳ್ಳುವ ಮೂಲಕ ಚಳವಳಿಗಳು ಇವುಗಳನ್ನು ಕೊನೆಗಾಣಿಸಬಹುದೆಂಬುದನ್ನು ಅರ್ಥಮಾಡಿಕೊಳ್ಳುವಲ್ಲಿ ಮುನ್ನಡೆ ಸಾಧಿಸಬಹುದು,

---

ಗೋರಿಯಾಯಿತು ಕವನ....!

ಅವಬಂದ ಇವಳ ನೋಡಿದ
ಅಪ್ಪಿ ಕೊಂಡ ಮುದ್ದಿಸಿದ
ಮಿಲನಗೊಂಡ
ಜನನವಾಯಿತು ಕವನ...!

ಅವಬಂದ ಇವಳ ನೋಡಿದ
ಹೃದಯ ತಟ್ಟಿದ ಕಣ್ಣ ಬೆರೆಸಿದ
ವಿರಹ ಹುಟ್ಟಿಸಿ ನಡೆದ
ಜನನವಾಯಿತು ಕವನ...!

ಅವಬಂದ ಇವಳ ಬಳಿಸಾರಿದ
ಹಸಿದ ಒಡಲಲ್ಲಿ ಕಿಚ್ಚೆಬ್ಬಿಸಿದ
ಆಶೆಯ ಕಣ್ಣುಗಳ ಅರಳಿಸಿದ
ಮಿಂಚಂತೆ ಮಾಯವಾದ...!
ಗೋರಿಯಾಯಿತು ಕವನ ... !

ದುರ್ಗಾಸುತೆ.

ಸ್ತ್ರೀಸಂಚಯ

ಪ್ರಕಾಶಕರು:- ಮಹಿಳಾ ಸಮಾಖ್ಯಾ ಕರ್ನಾಟಕ
೨೭೨, ೨ನೇ ಅಡ್ಡರಸ್ತೆ
ಕೇಂಬ್ರಿಜ್ ಲೇ ಔಟ್
ಬೆಂಗಳೂರು-೫೬೦೦೦೮

ಮಗಳು ದೊಡ್ಡವಳಾದಳು

ಅರಿಕೆಯಿಂದ.............

ಋತುಸ್ರಾವದ ಬಗ್ಗೆ ನಮ್ಮಲ್ಲಿ ಅನೇಕ ತಪ್ಪು ಅಭಿಪ್ರಾಯಗಳು ಮತ್ತು ನಂಬಿಕೆಗಳು ಇವೆ. ಸಂಪೂರ್ಣ ಅವೈಜ್ಞಾನಿಕವಾದ ಇವು ಹೆಣ್ಣಿನ ಆತ್ಮವಿಶ್ವಾಸವನ್ನು ನುಚ್ಚು ನೂರು ಮಾಡುವಂತಹವು. ಋತುಸ್ರಾವ ಎಂತದೋ ಅಸಹಜ ಕ್ರಿಯೆಯೆಂಬ ಕಲ್ಪನೆಯನ್ನು ತುಂಬುವ ಮೂಲಕ ಅದರ ಬಗ್ಗೆ ಅಸಹ್ಯ, ಮುಜುಗರಗಳನ್ನು ಹುಟ್ಟಿಸಲಾಗಿದೆ. ಹೆಣ್ಣನ್ನು ಮುದುರಿ ಕೊಳ್ಳುವಂತೆ ಮಾಡಲಾಗಿದೆ.

ಋತುಸ್ರಾವವೆಂಬುದು ಹೆಣ್ಣಿನ ದೇಹ ಪ್ರಕೃತಿಗೆ ಹೊಂದಿಕೊಂಡಂತಹ ಅತ್ಯಂತ ಸಹಜ ಕ್ರಿಯೆ ಎಂಬುದನ್ನು ಪ್ರತಿ ಹೆಣ್ಣು ಕಂಡುಕೊಂಡು, ಅದನ್ನು ಸರಿಯಾಗಿ ಅರ್ಥಮಾಡಿಕೊಂಡು ಹೆಚ್ಚಿನ ಆತ್ಮ ವಿಶ್ವಾಸ ಪಡಕೊಳ್ಳಲು ಸಹಾಯವಾಗಲಿ ಎಂಬುವ ಆಶಯವೇ ಈ ಪುಸ್ತಿಕೆ. ಹಾಗೆಯೇ ಋತುಸ್ರಾವಕ್ಕೆ ಸಂಬಂಧಿಸಿದ ಇನ್ನಿತರ ಅಂಶಗಳ ಚರ್ಚೆಗೂ ಈ ಪುಸ್ತಕ ಎಡೆ ಮಾಡಿಕೊಡುತ್ತದೆ.

ಅಂತರಾಳದ ಲೋಕದಲ್ಲಿ

ತಟ್ಟೆ (ಕಸ) ಯ ಕೆಲಸ ಏನು ಎಂಬುದನ್ನು ಈ ಹಿಂದೆಯೇ ನೋಡಿದ್ದೇವೆ. ಭ್ರೂಣಕ್ಕೆ ಉಸಿರು, ಆಹಾರ ಒದಗಿಸುವುದು ಇದು ಎಂದು ಕಂಡು ಕೊಂಡಿದ್ದೇವೆ. ಮಗು ಹೊರಗೆ ಬರುವವರೆಗೂ ಇದು ಆ ಕೆಲಸ ಮಾಡುತ್ತದೆ. ಮಗು ಹೊರಗೆ ಬಂದು ಬಿಟ್ಟ ನಂತರ ಅದಕ್ಕೆ ಏನೂ ಕೆಲಸ ಇರುವುದಿಲ್ಲ. ಅದು ಹೊರ ಬಂದ ನಂತರ ಮಣ್ಣಿನಲ್ಲಿ ಹೂತು ಹಾಕುತ್ತೇವೆ ತಾಯಿಯ ದೇಹದಿಂದ ಹೊರಬಂದ ನಂತರ ಆದಕ್ಕೆ ಏನೂ ಬೆಲೆ ಇಲ್ಲದೇ ಹೋಗುವುದರಿಂದಲೇ ಅದನ್ನು ಕಸ ಎನ್ನುತ್ತೇವೆಯೇನೋ? ಪ್ರಾಯಶಃ ನಾವಿಲ್ಲಿ ಈವರೆಗೂ ಅದು ನಿರ್ವಹಿಸಿದ ಅದ್ಭುತವಾದ ಕಾರ್ಯವನ್ನು ಮರೆ ಮಾಚುತ್ತಿದ್ದೇವೇನೋ! ಆದ್ದರಿಂದ ಈಗ ಹೇಳೋಣ ಇದು ಕಸವಲ್ಲ ಜೀವರಸ!

ಮೌನ ಮಾತಾದಾಗ

ಸ್ತ್ರೀಯರಲ್ಲಿ ಮೂಡುತ್ತಿರುವ ಜಾಗೃತಿ ಹಾಗೂ ಬದಲಾಗುತ್ತಿರುವ ಸಾಮಾಜಿಕ ಪರಿಸರದಿಂದಾಗಿ ಸ್ತ್ರೀಯರ ಸಮಸ್ಯೆಗಳನ್ನು ನೋಡುತ್ತಿರುವ ದೃಷ್ಟಿಕೋನಗಳು ಬದಲಾಗುತ್ತಿನೆಯಲ್ಲವೆ? ಇಂತಹ ಆಲೋಚನೆ, ವಿಚಾರಗಳು ಅಸ್ಪಷ್ಟವಾಗಿದ್ದು ವೈರುಧ್ಯಗಳಿಂದ ಕೂಡಿರಬಹುದು. ಮಹಿಳಾ ಶೋಷಣೆ, ಕೌಟುಂಬಿಕ ಜವಾಬ್ದಾರಿ, ವಿವಾಹ ಪದ್ಧತಿ, ವರದಕ್ಷಿಣೆ, ಅಸಮಾನವೇತನ ಮುಂತಾದ ವಿಷಯಗಳ ಸುತ್ತ ನಿಮ್ಮ ಸ್ವಂತ ವಿಚಾರಗಳನ್ನು ಹಾಗು ಅನುಭವಗಳನ್ನು ಪುಟ್ಟ ಲೇಖನದ ರೂಪದಲ್ಲಿ ಬರೆದು ಕಳಿಸಿದ ಲೇಖನಗಳಿಗೆಂದು "ಮೌನ ಮಾತಾದಾಗ" ಅಂಕಣವಿದೆ. ಪ್ರಕಟವಾದ ಲೇಖನಗಳಿಗೆ ಪ್ರತಿಕ್ರಿಯೆಗಳನ್ನು ಪ್ರಕಟಿಸಲಾಗುವುದು.

ಸಂ. ಮಂ.

ನಿಮಗೆಲ್ಲರಿಗೂ ತಿಳಿದಿರುವ ಹಾಗೆ ಮುಸ್ಲಿಂರ ಮನೆಗಳಲ್ಲಿ ಸಂಪ್ರದಾಯ ಹೆಚ್ಚು. ಅದರಲ್ಲೂ ಮುಸ್ಲಿಂರು ತಮ್ಮ ಹೆಣ್ಣು ಮಕ್ಕಳನ್ನು ಬಹಳ 'ಘೋಷದಿಂದ' ಇಟ್ಟಿರುತ್ತಾರೆ. ಅಂತಹ ಒಂದು ಸಂಪ್ರದಾಯಸ್ಥರ ಮನೆಯಲ್ಲಿ ಹುಟ್ಟಿದವಳು ನಾನು. ನಮ್ಮ ಮನೆಯಲ್ಲಿ ಹೆಣ್ಣು ಮಕ್ಕಳನ್ನು ಓದಿಸುವುದು ಬೇಡ ೧೮ ವರ್ಷ ತುಂಬುವವರೆಗೂ ಹೇಗೋ ಸಾಕಿ ಆಮೇಲೆ ಮದುವೆ ಮಾಡಿಕೊಟ್ಟು ಬಿಡೋಣ ಎಂದು ಮಾತನಾಡಿಕೊಳ್ಳುತ್ತಿದ್ದರು. ಅದರಲ್ಲೂ ನನಗೆ ಚೆನ್ನಾಗಿ ಓದಿ ಎಲ್ಲಾ ಹೆಂಗಸರ ತರಹ ಒಂದು ಉದ್ಯೋಗದಲ್ಲಿ ಇರಬೇಕೆಂದು ಆಸೆ. ಮನೆಯಲ್ಲಿ ಹಟ ಮಾಡಿ ಹೇಗೇಗೋ ಎಸ್. ಎಸ್. ಎಲ್. ಸಿ. ಮುಗಿಸಿದೆ. ಇಷ್ಟೇ ಸಾಕು ನೀನು ಓದಿದ್ದು ಇನ್ನು ಮನೆಯಲ್ಲಿ ಕೆಲಸ ಮಾಡಿಕೊಂಡು ಇರು ಎಂದು ಎಲ್ಲರೂ. ಹೇಳತೊಡಗಿದರು. ಆಗಲೂ ಸಹ ನಾನು ಹಟ ಮಾಡಿ ಊಟ ಬಿಟ್ಟು, ಅತ್ತು, ರಂಪ ರಾಮಾಯಣ ಮಾಡಿ ಕಾಲೇಜಿಗೆ ಸೇರಿದೆ. ಹೇಗೋ ಪ್ರಥಮ ಪಿ. ಯು. ಸೀ. ಪಾಸು ಮಾಡಿ ದ್ವಿತೀಯ ಪಿ. ಯು. ಸಿ. ಗೆ ಬಂದೆ. ನಮಗೆ ದ್ವಿತೀಯ ಪಿ. ಯು. ಸಿ ಪರೀಕ್ಷೆ ಹೊಸಕೋಟೆ ಕಾಲೇಜಿನಲ್ಲಿ ಇತ್ತು. ಅಲ್ಲಿಗೆ ಹೋಗಲು ದಿನವೂ ಮನೆಯಲ್ಲಿ ಒಂದಲ್ಲಾ ಒಂದು ರೀತಿಯ ಜಗಳ ಮಾಡಿಕೊಂಡೆ ಹೋಗುತ್ತಿದೆ.

ಹೋಗಿರುವಾಗ ಒಂದು ದಿನ ನನ್ನ ಗೆಳತಿಯರೆಲ್ಲಾ ಸೇರಿ 'ಹೋಟೆಲಿ' ಗೆ ಹೋದೆವು. ನಾವೆಲ್ಲಾ ಊಟ ಮುಗಿಸಿ ಕಾಫಿ ಕುಡಿಯುತ್ತಿದ್ದೆವು. ಅಷ್ಟರಲ್ಲಿ ನಮ್ಮ ಮುಂದಿನ ಸೀಟಿಗೆ ಯಾವನೋ ಒಬ್ಬ ಬಂದ ಬಂದವನು ಊಟ ಮುಗಿಸಿ ಸುಮ್ಮನೆ ಹೋಗ ಬಾರದೆ ಒಂದು ತುತ್ತು ಕೈಯಲಿಟ್ಟು ಕೊಂಡು 'ಬಾ ನಿನಗೆ ತಿನ್ನಿಸುವೆ' ಎಂದು ಕೈಯಲ್ಲಿ ತುತ್ತು ಹಿಡಿದುಕೊಂಡು ತೋರಿಸಿದ. ಅಂತಹ ಒಂದು ಪರಿಸ್ಥಿತಿಯಲ್ಲಿ ಯಾವ ಹೆಣ್ಣಿಗೇ ಆಗಲಿ ಕೋಪ ಬರದೆ ಇರಲು ಸಾಧ್ಯವಿಲ್ಲ. ಅದರಲ್ಲೂ ನನಗೋ ಬಹಳ ಸಿಟ್ಟು. ನಾನು ಅಲ್ಲಿಯೇ ಕುಳಿತು 'ಚಪ್ಪಲಿ ತೆಗೆದು ಹೊಡೆವೆ ನನ್ಮಗನೇ' ಎಂದು ಬೈದು ಬಿಟ್ಟೆ. ಅಷ್ಟರಲ್ಲಿ ಅವನಿಗೆ ಎಲ್ಲಿ ಇತ್ತೋ ಕೋಪ, ಎದ್ದು ಬಂದು ಅವನು ನನಗೆ "ತನ್ನ ಹೆಂಡತಿಯನ್ನು" ಬೈಯುವಂತೆ "ಏನೇ ನೀನು ಹೇಳಿದ್ದು ನನಗೆ ಚಪ್ಪಲಿಯಲ್ಲಿ ಹೊಡೀತೀಯೇನು ನೋಡೋಣ ನಿನಗೆ ಅಷ್ಟು ಧೈರ್ಯವಿದ್ದರೆ ಹೊಡಿ" ಎಂದು ಕೆಟ್ಟ ಕೆಟ್ಟ ಮಾತುಗಳಲ್ಲಿ ಬೈಯ ತೊಡಗಿದ. ಎಷ್ಟಾದರೂ ಗಂಡಸಲ್ಲವೇ ತನ್ನ ಪೌರುಷವನ್ನು ಹೆಣ್ಣು ಮಕ್ಕಳ ಮುಂದೆ ತೋರಿಸದೆ ಯಾರ ಮುಂದೆ ತೋರಿಸಲು ಸಾಧ್ಯ?

ಹೆಣ್ಣು ಮಕ್ಕಳಿಗೆ ಹೊಟ್ಟೆ ಹಸಿವಾದರೂ ಸಹ ಮನೆಗೇ ಬಂದು ಊಟ ಮಾಡ ಬೇಕೆ? ಅವರಿಗೆ ಹೋಟೆಲಿ ಗೆ ಹೋಗಿ ತಿನ್ನುವ ಹಕ್ಕು ಇಲ್ಲವೆ?

ಗಂಡಸರಿಗೆ ಮಾತ್ರ ಹೋಟೆಲುಗಳಿವೆಯೇ? ಇದೆಂತಹ ನ್ಯಾಯ? ನಾನು ಈ ರೀತಿ ಜಗಳ ಮಾಡಿದ್ದಕ್ಕೆ ನನ್ನ ಗೆಳತಿಯೊಬ್ಬಳು ಹೀಗೆಂದಳು. ಅವನು ಏನಾದರೂ ಹೇಳಿಕೊಂಡು ಹೋಗಲಿ ನೀನು ಸುಮ್ಮನಿರಬೇಕಿತ್ತು ಎಂದಳು. ನಾನು ಹೇಗೆ ಸುಮ್ಮನಿರಬೇಕು. ಒಂದು ವೇಳೆ ನಾನು ಹೇಳಿಕೊಂಡು ಹಾಳಾಗಿ ಹೋಗಲಿ ಎಂದು ಕೊಂಡು ಸುಮ್ಮನಿ

ದ್ದಿದ್ದರೆ ಆತ ಮತ್ತೇನಾದರೂ ಒಂದು ಕಿರಿಕಿರಿ ಮಾಡಿಕೊಂಡು ಬಂದೇ ಬರುತ್ತಿದ್ದ, ಆತ ಏನು ಮಾಡಲೂ ಹಿಂಜರಿಯುತ್ತಿರಲಿಲ್ಲ.

ಅವನಿಗೆ ನಾಚಿಕೆ, ಮಾನ, ಮರ್ಯಾದೆ ಇದ್ದರೆ ಅವನು ಇನ್ನೊಂದು ಬಾರಿ ಯಾವ ಹೆಣ್ಣು ಮಗುವಿನ ತಂಟೆಗೂ ಹೋಗೊಲ್ಲ. ನಾನು ಅಂತಹ ಮಾತುಗಳನ್ನು ಅವನಿಗೆ ಕೇಳಿದ್ದೇನೆ.

ನಿಜವಾಗಲೂ ನನ್ನ ಜೀವನದಲ್ಲಿ ನಡೆದ ತುಂಬಾ ಕಹಿ ಘಟನೆಯಿದು, ಇಂತಹ ಹುಡುಗರಿಗೆ ಮೂರು ಕಾಸು ಸಂಪಾದನೆ ಮಾಡಲು ಯೋಗ್ಯತೆ ಇಲ್ಲದಿದ್ದರೂ ಸಹ ಹೆಣ್ಣು ಮಕ್ಕಳನ್ನು ಚುಡಾಯಿಸುವುದೇ ದೊಡ್ಡ ಉದ್ಯೋಗವಾಗಿರುತ್ತೆ.

ಮತ್ತೊಂದು ದಿನ ನನ್ನ ಗೆಳತಿಯೊಬ್ಬಳು ಬೆಂಗಳೂರಿಗೆ ಹೋಗಬೇಕೆಂದು "ಬಸ್ ಸ್ಟಾಪ್" ನಲ್ಲಿ ನಿಂತಿದ್ದಳಂತೆ, ಒಬ್ಬ ಹುಡುಗ ಅವಳ ಪಕ್ಕದಲ್ಲಿ ನಿಂತು ಅವಳ ಕಾಲು ತುಳಿಯುವ ಧೈರ್ಯ ಮಾಡಿದನಂತೆ. ಆಕೆ ಅವನನ್ನು "ಥು ಲೋಫರ್" ಎಂದು ಬೈದು ಪಕ್ಕಕ್ಕೆ ಹೋಗಿ ನಿಂತು ಕೊಂಡಳಂತೆ ಅವನು ಮತ್ತೇ ಅವಳು ನಿಂತಲ್ಲಿಗೆ ಬಂದು "ಎಕ್ಸ್‌ಕ್ಯೂಸ್‌ಮಿ" ನಿಮ್ಮ ಹೆಸರು ಏನು ಎಂದು ಕೇಳಿದನಂತೆ. ಅದಕ್ಕೆ ಅವಳು "ನನ್ನ ಹೆಸರು ಕೇಳಿ ನಿಮಗೇನ್ರೀ ಆಗ್ಬೇಕು ಬೇರೆ ಕೆಲಸ ಇಲ್ವ ನಿಮಗೆ" ಎಂದು ಬೈದಳಂತೆ, ಅದಕ್ಕೆ ಅವನು "ಕೆಲಸ ಇದ್ದಿದ್ದರೆ ಇಲ್ಲಿಗೆ ಏಕೆ ಬರುತ್ತಿದೆ ಮೇಡಂ" ಎಂದನಂತೆ. ಅದಕ್ಕೆ ಅವಳು "ಏನ್ರೀ ನಿಮ್ಮ ಮನೆಯಲ್ಲಿ ಹೆಣ್ಣು ಮಕ್ಕಳಿಲ್ವ ನಿಮಗೆ ಯಾರೂ ಅಕ್ಕ ತಂಗಿರು ಇಲ್ವ" ಎಂದಳಂತೆ ಅದಕ್ಕೆ ಅವನು ಏನ್ ಮೇಡಂ ಎಲ್ಲಾ ಹೆಣ್ಮಕ್ಕಳು ಅಕ್ಕ ತಂಗಿಯರಾಗಿ ಬಿಟ್ರೆ ಹೆಂಡತಿಯರು ಆಗುವವರು ಯಾರು? ಎಂದು ಅವಳನ್ನೇ ಪ್ರಶ್ನಿಸಿದನಂತೆ. ಅವಳು ನನ್ನ ಬಳಿ ಬಂದು ಈ ವಿಷಯವನ್ನು ತಿಳಿಸಿದಳು, ಅವಳು ಹೇಳುತ್ತಾಳೆ "ಏನೇ ನಾವು ಓದಲಿಕ್ಕೂ ಹೋಗ ಬಾರದೇನೆ? ನಮ್ಮನ್ನು ಏಕೆ ಇಷ್ಟು ಕೀಳಾಗಿ ನೋಡುತ್ತಾರೆ ಈ ಹುಡುಗರು? ಅದಕ್ಕೆ ನಾನು ಏನು ಹೇಳಬೇಕು ಅವಳಿಗೆ? ಅವರಿಗೆಲ್ಲಾ ದೇವರು ಕೊಟ್ಟಿರೋ ಬುದ್ಧಿ ಅದು ಎಂದು ಹೇಳಬೇಕೆ? ಅಥವಾ ಅವರಿಗೆಲ್ಲಾ ಬಿಟ್ಟಿ ಕೂಳು ತಿಂದು ಕೊಬ್ಬು ಎಂದು ಹೇಳಬೇಕೆ? ಏನೆಂದು ನಾನು ಅವಳಿಗೆ ಹೇಳಬೇಕೋ ತಿಳಿಯುತ್ತಿಲ್ಲ.

ಮತ್ತೊಂದು ದಿನ ನನ್ನ ಮತ್ತೊಬ್ಬ ಗೆಳತಿ ಕಾಲೇಜಿಗೆಂದು "ಸಿಟಿ" ಗೆ ಹೋಗುತ್ತಿದ್ದಳಂತೆ. ಬಹಳ ಹೊತ್ತು ಬಸ್ಸಿಗಾಗಿ ಕಾದು ಕೊನೆಗೆ ಬಸ್ ಬಂತು. ಅವಳು ಬಸ್ ಹತ್ತಿದ ತಕ್ಷಣವೇ ಸೀಟು ಸಿಕ್ಕಿತ್ತಂತೆ. ದೇವರು ನನ್ನ ಮೇಲೆ ದಯೆ ತೋರಿದ ಎಂದು ಮನಸಿನಲ್ಲಿ ಅಂದುಕೊಂಡು ಕುಳಿತಳಂತೆ ಎರಡು ಸ್ಟಾಪ್ ಬರುವವರೆಗೂ ಯಾರ ಕಾಟವು ಇಲ್ಲದೆ ಸುಖವಾಗಿ ಪ್ರಯಾಣ ಮಾಡುತ್ತಿದ್ದಳು. ಅಷ್ಟರಲ್ಲೇ ಆ ಬಸ್ಸಿಗೆ ಒಬ್ಬ ಮನುಷ್ಯ ಹತ್ತಿದ. ಅವನು ಬಸ್ಸಿನಲ್ಲಿ ಹಿಂದುಗಡೆ ಜಾಗವಿದ್ದರೂ ಹೋಗದೆ ಅವಳ ಪಕ್ಕಕ್ಕೆ ಬಂದು ನಿಂತುಕೊಂಡು ಬೇಕೆಂದು ಅವಳ ಮೈಗೆ ಅಂಟಿಕೊಂಡು ನಿಂತ. ಅದಕ್ಕೆ ಅವಳು ಬಹಳ ಹೊತ್ತು ಜರುಗಿ, ಜರುಗಿ ಕುಳಿತಳು. ಆದರೂ ಸಹ ಅವಳ ಮೇಲೆಯೇ ಬೀಳುತ್ತಿದ್ದ, ಆಗ ಅವಳು "ಏನ್ ಸಾರ್ ಸ್ವಲ್ಪ ಒತ್ತಿಕೊಂಡು ನಿಲ್ಲಬಾರದೆ" ಎಂದಳು. ಅಷ್ಟರಲ್ಲಿ ಅವನು ಬಹಳ ಕೋಪಗೊಂಡು "ಏನ್ರಿ ನೀವು ಹಂಗೆ ಹೇಳ್ತೀರಲ್ಲ ಈ ಬಸ್ ನಿಮ್ಮ ಅಪ್ಪನದ? ಬಾಯಿಗೆ ಬಂದಂಗೆಲ್ಲಾ ಮಾತಾಡ್ತಿರಲ್ಲ. ನಿಮಗೆಲ್ಲಾ ಮನೆಯಲ್ಲಿ ಮಾಡೋಕೆ ಕೆಲ್ಸ ಇರೋದಿಲ್ವ? ಗಂಡಸರು ನಿಮಗೆ ಮುಟ್ಟಿಸಿಕೊಳ್ತಾರೆ ಅಂತ ಅಷ್ಟೊಂದು ನಾಚಿಕೆ, ಮಾನ, ಮರ್ಯಾದೆ ಇದ್ದರೆ ಮನೆಯಲ್ಲಿ ಅಡಿಗೆ ಮಾಡಿಕೊಂಡು ಇರ್ರೀ. ಹಿಂಗೆಲ್ಲಾ ಬಸ್‌ಗಳಲ್ಲಿ ಓಡಾಡಬೇಡಿ" ಎಂದು ಒಂದೇ ರಾಗದಲ್ಲಿ ಕೂಗಿದನಂತೆ, ಅದಕ್ಕೆ ಅವಳು ಅಲ್ಲಪ್ಪ ಹಿಂಗೆ ಮೈಮೇಲೆಯೇ ಬೀಳುತ್ತಿಯಲ್ಲ, ಅದಕ್ಕೆ ಹೇಳಿದೆ ಅಷ್ಟೆ. ಅದಕ್ಕೆ ಯಾಕೆ ಇಷ್ಟು ಜೋರಾಗಿ ಕೂಗ್ತಿಯಾ" ಎಂದಳು, ಅದಕ್ಕೆ ಅವನು "ಏನು ಹೇಳಿದ್ದು ನೀನ್ ಇನ್ನೊಂದು ಸಾರಿ ಹೇಳು ನೀನ್ ಬಲೆ ಪಸಂದಾಗಿದ್ದೀಯ ನಿನ್ ಮೈ ಮೇಲೆ ಬೀಳ್ಲಾ ನಾನು. ಸುಮ್ಮ ಸುಮ್ಮನೇ ಮೇಲೆ ಬಿದ್ದು ಜಗಳಕ್ಕೆ ಬರ್ತೀಯಲ್ಲ. ನೀನು ಎಷ್ಟಾದರೂ ಹೆಣ್ಮಗು ನಾನು ಮನಸ್ಸು ಮಾಡಿದರೆ ನಿನಗೆ ಏನ್ಬೇಕಾದರೂ ಮಾಡ್ತೀನಿ ಎಂದ. ಇವಳು ಸುಮ್ಮನಿರದೆ ಕಂಡಕ್ಟರಿಗೆ ಹೇಳಿದಳು ಆ ಕಂಡಕ್ಟರ್ ನೀನು ಸುಮ್ಮನಿದ್ದರೆ ಯಾರೂ ಏನೂ

ಮಾಡೋದಿಲ್ಲ, ನೀನೆ ಮೇಲೆ ಬಿದ್ದು ಬರ್‍ತೀಯಲ್ಲ. ದಿನಾ ಬಸ್‌ನಲ್ಲಿ ಇದೇ ರಗಳೆ ನಿಮ್‌ದಲ್ಲಾ, ಮನೆಗಳಲ್ಲಿ ಹೇಳಿ ಎಲ್ಲಾ ಒಂದೊಂದು ಟಿ. ವಿ. ಎಸ್. ತೆಗೆದುಕೊಳ್ಳಿ, ಆಗ ನಿಮ್ಮನ್ನು ಯಾರೂ ಮುಟ್ಟಿಸಿಕೊಳ್ಳುವುದಿಲ್ಲ ಎಂದು ಅವಳ ಮೇಲೆಯೇ ರೇಗಿದ. ಅವಳಿಗೆ ಬೇಜಾರಾಗಿ ಮುಂದಿನ ಸ್ಟಾಪ್ ನಲ್ಲಿ ಇಳಿದು ಬಿಟ್ಟು ಕೊನೆಗೆ ಕಾಲೇಜಿಗೂ ಹೋಗದೆ ವಾಪಸ್ ಮನೆಗೆ ಬಂದು ಬಿಟ್ಟಳು.

ಹೀಗೆ ನಾವು ಹೆಣ್ಣು ಮಕ್ಕಳು ಈಗ ಒಂದು ಚೂರು ಓದಿ ನಮ್ಮ ಕಾಲಿನ ಮೇಲೆ ನಾವು ನಿಂತು ಕೊಳ್ಳೋಣ ಎಂದುಕೊಳ್ಳುತ್ತೇವೆ. ಮುಂದೆ ಎಂತಹ "ಪತಿ ದೇವರು" ಸಿಗುತ್ತಾನೋ ಯಾರಿಗೆ ಗೊತ್ತು. ಈಗ ಯಾವುದೋ ಒಂದು ಉದ್ಯೋಗದಲ್ಲಿ ಇರೋಣವೆಂದರೆ ಇವರ ಕಾಟ ತಪ್ಪಿದಲ್ಲ,

ಇಂತಹ ಹುಡುಗರು ಮೊದಲು ಹುಡುಗಿರನ್ನು ಚುಡಾಯಿಸಲು ಬಿಡಬೇಕು ಎಂದು ಹೇಳಬೇಕು ಆಗಲೇ ಹೆಣ್ಣು ಮಕ್ಕಳಿಗೆ ಒಳ್ಳೆ ಕಾಲ ಬರುವುದು ಈ ದೇಶಕ್ಕೆ ಸ್ವಾತಂತ್ರ್ಯ ಬಂದಿದೆ ಸರಿ. ಆದರೆ ಹೆಣ್ಣು ಮಕ್ಕಳಿಗೆ ಇನ್ನೂ ಸ್ವಾತಂತ್ರ್ಯ ಬಂದಿಲ್ಲ. ಹೆಂಗಸರಿಗೆ ಈಗಲೂ ಸಹ ಗಂಡಸರ ಗುಲಾಮಳು ಅವರು ಏನೇ ಮಾಡಿದರೂ ಸಹಿಸಿಕೊಂಡು ಹೋಗಬೇಕು ಎನ್ನುವ ರೀತಿಯಲ್ಲಿ ನೋಡುತ್ತಾರಲ್ಲ ಏಕೆ?

ಎಚ್. ಎನ್. ಷಾಹೀನ್.

ಬಿ. ಟಿ. ಎಸ್. ನಲ್ಲಿ ಸ್ತ್ರೀಯರ ಬವಣೆ

ಬಿ. ಟಿ. ಎಸ್. ಬಸ್‌ಗಳಲ್ಲಿ ಸ್ತ್ರೀಯರ ಬವಣೆ ನಮ್ಮ–ನಿಮ್ಮೆಲ್ಲರ ನಿತ್ಯದ ಅನುಭವವಾಗಿದೆ. ಬಹುಶಃ ನಾವೆಲ್ಲರೂ ಸೇರಿ ಈ ಬಗ್ಗೆ ಯಾವುದೇ ರೀತಿಯ ಕಾಳಜಿ ತೋರಿಸದಿದ್ದರೆ ಬಹುಶಃ ಮೀಸಲಾತಿ ಪರಿಚಯಿಸಿದ್ದೂ ಕೂಡಾ ಚರಿತ್ರೆಯಲ್ಲಿ ದಾಖಲಾಗಿ ಬಿಡಬಹುದು ಅಷ್ಟೇ. ನಾವು–ನೀವು, ಮಹಿಳಾ ಸಂಸ್ಥೆಗಳು ಸೇರಿ ಈ ಮೀಸಲಾತಿಯನ್ನು ಉಳಿಸಿಕೊಳ್ಳುವುದಕ್ಕೆ, ಜೊತೆಗೆ ಸರಿಯಾಗಿ ಜಾರಿಗೆ ಬರುವಂತೆ ಮಾಡಲು ಹೇಗೆ ಪ್ರಯತ್ನ ಪಡಬಹುದು?

೧) ಕರ ಪತ್ರದ ಮೂಲಕ ಜನರನ್ನು ಎಚ್ಚರಗೊಳಿಸಲು ಪ್ರಯತ್ನಿಸುವುದು.

೨) ಸಂಬಂಧ ಪಟ್ಟ ಅಧಿಕಾರಿಗಳಿಗೆ ಮನವಿ ಅರ್ಪಿಸುವುದು

೩) ಗುಂಪು–ಗುಂಪುಗಳಲ್ಲಿ ಸ್ತ್ರೀಯರು ಕೆಲವು ಬಸ್ಸುಗಳಲ್ಲಿ ಓಡಾಡಿ ಸ್ತ್ರೀಯರ ಸೀಟುಗಳನ್ನು ಸ್ತ್ರೀಯರಿಗೇ ಬಿಡುವಂತೆ ಕೆಲವು ದಿನಗಳ ಕಾಲ ಕಾರ್ಯಕ್ರಮ ಹಮ್ಮಿಕೊಳ್ಳುವುದು

೪) ಸಹಕರಿಸದಿದ್ದಲ್ಲಿ ಬಸ್‌ಗಳನ್ನು ಪೋಲೀಸ್ ಸ್ಟೇಷನ್ ಗೆ ತೆಗೆದುಕೊಂಡು ಹೋಗುವಂತೆ ಒತ್ತಾಯಿಸುವುದು

೫) ಸ್ತ್ರೀಯರಿದ್ದರೂ ಅವರಿಗೆ ಮೀಸಲಾದ ಸ್ಥಳ ಬಿಟ್ಟು ಕೊಡದಿದ್ದರೆ ದಂಡ ತೆರುವಂತೆ ಒತ್ತಾಯಿಸುವುದು, ನಿಮಗೇನೆನಿಸುತ್ತದೆ,

ಪ್ರತಿಕ್ರಿಯಿಸಿ.

REGD No KRNA 271

ಮಾನಸ

ಮಹಿಳೆಯರ ಮೇಲೆ ನಡೆಯುವ ಅಮಾನವೀಯ ದೌರ್ಜನ್ಯ, ಹಿಂಸೆಗಳನ್ನು ಬೆಳಕಿಗೆ ತರುವುದಕ್ಕಾಗಿ.

ಶೋಷಿತ ವ್ಯವಸ್ಥೆಯನ್ನು, ಅದರ ವಿವಿಧ ರೂಪಗಳನ್ನು ಗುರುತಿಸುವುದಕ್ಕಾಗಿ

ಮಹಿಳೆಯರೊಂದಿಗೆ ಆತ್ಮೀಯ ಅರ್ಥಪೂರ್ಣ ಸಂವಾದಕ್ಕಾಗಿ.

ಮಹಿಳಾ ಆಂದೋಲನದ ಹೊಸ ದಿಕ್ಕುಗಳ ಹುಡುಕಾಟಕ್ಕಾಗಿ.



ವಿಳಾಸ ಮಾನಸ"
ಪಂಚಾಯಿತಿ ರಸ್ತೆ
ಕಾಡುಗೋಡಿ
ಬೆಂಗಳೂರು—560067

C. G. MANJULA
9. 3rd CROSS
MARKHAM ROAD
ASHOK NAGAR
BANGALORE - 560025.